Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13
RNI No. KARBIL - 2004/18001



## ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ



ಕ್ರಿಯಾಶೀಲ ಸಹಕಾರಿ

### ಶ್ರೀ ಜಿ. ನಂಜನಗೌಡ

ವೃತ್ತಿಯಲ್ಲಿ ಸನ್ನದು ಲೆಕ್ಕಪರಿಶೋಧಕರು (ಚಾರ್ಟರ್ಡ್ ಅಕೌಂಟೆಂಟ್) ಪ್ರವೃತ್ತಿಯಲ್ಲಿ ಸಹಕಾರಿಗಳು ಹಾಗೂ ಕೃಷಿಕರು. ಸಮಾಜದ ಹಿಂದುಳಿದವರ್ಗದ ಹಾಗೂ ದೀನದಲಿತರ ಬಗ್ಗೆ ಅಪಾರ ಕಾಳಜಿ ಇರುವ ಶ್ರೀಯುತರು ಸಹಕಾರ ಕ್ಷೇತ್ರ ಸಾಮಾನ್ಯ ಜನರನ್ನು ತಲುಪುವ ಏಕೈಕ ಮಾರ್ಗ ಯಾವುದು ಬೇದಭಾವ ಹಾಗೂ ತಾರತಮ್ಯವಿಲ್ಲದೆ ಸಮಾಜದ ಕನಿಷ್ಠ ವರ್ಗದ ಜನರಿಗೆ ಸೇವೆ ಮಾಡಲು ಅವಕಾಶವಿರುವ ಕ್ಷೇತ್ರ ಇದಾಗಿದೆ. ಆದ್ದರಿಂದ ಈ ಕ್ಷೇತ್ರದ ಕ್ರಿಯಾಶೀಲ ಸಹಕಾರಿಯಾಗಿ ಕಾರ್ಯ ನಿರ್ವಹಿಸುವ ನನಗೆ ಹೆಮ್ಮೆಯ ಹಾಗೂ ಗೌರವದ ವಿಷಯ ಎನ್ನುತ್ತಾರೆ.

ಈ ಕ್ಷೇತ್ರದ ಅಭಿವೃದ್ಧಿಗೆ ವಿಶೇಷವಾಗಿ ಮಹಿಳೆಯರು ಹಾಗೂ ಯುವಕರು ಹೆಚ್ಚಾಗಿ ತೊಡಗಿಸಿಕೊಂಡಲ್ಲಿ ಈ ಕ್ಷೇತ್ರದ ಬೆಳವಣಿಗೆಯ ವೇಗ ಹೆಚ್ಚುತ್ತದೆ ಹಾಗೂ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ನನ್ನ ಅಭಿಪ್ರಾಯ ಎನ್ನುತ್ತಾರೆ. ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ತೀರನಹಳ್ಳಿಯಲ್ಲಿ ದಿ: 1-6-1960ರಲ್ಲಿ ಜನಿಸಿದ ಜಿ. ನಂಜನಗೌಡ ಅವರು ತೀರನಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ ನಾಗರತಟ್ಟೆಯಲ್ಲಿ ಪ್ರೌಢ ಶಿಕ್ಷಣ, ಸಿರಿಗೆರೆಯ ಕಾಲೇಜು ಶಿಕ್ಷಣ ಮುಗಿಸಿದರು.

ಶಿವಮೊಗ್ಗದ ಜಿ.ಕೆ. ಶೆಟ್ಟರ್ & ಸಿ.ಎ. ಇವರಲ್ಲಿ 1990ರಲ್ಲಿ ಸಿ.ಎ. ಆಗಿ ಪದವಿಯನ್ನು ಪೂರೈಸಿದ್ದಾರೆ ಹರಪ್ಪನಹಳ್ಳಿಯಲ್ಲಿಯೇ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು.

ಸನ್ನದು ಲೆಕ್ಕಪರಿಶೋಧಕರ ವೃತ್ತಿಯ ಜೊತೆಗೆ ಜನಸಾಮಾನ್ಯರಿಗೆ ಸಹಾಯವಾಗುವಂತಹ ಕಾರ್ಯಕ್ಷೇತ್ರವನ್ನು ಅರಸುತ್ತಾ ಸಹಕಾರಿ ಕ್ಷೇತ್ರದ ಬಗ್ಗೆ ಅಭಿಮಾನ ಮೂಡಿ ಸಹಕಾರ ತತ್ವಗಳ ಮೂಲಕ ಈ ಕಾರ್ಯ ಸಾಧ್ಯ ಎಂದು ಮನಗಂಡು 1997ರಲ್ಲಿ ಹರಪನಹಳ್ಳಿಯಲ್ಲಿ ಆದರ್ಶ ಪಟ್ಟನ ಸಹಕಾರ ಬ್ಯಾಂಕ್ ಸ್ಥಾಪಿಸಿ ಸಂಸ್ಥಾಪಕ ಅಧ್ಯಕ್ಷರಾದರು.

ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ನಂತರ ಹೊಸ ಕಾಯ್ದೆಗೆ ಸಂಸ್ಥೆಯನ್ನು ಪರಿವರ್ತನೆಗೊಳಿಸಿದೆ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಹಕಾರಿ ಕ್ಷೇತ್ರದ - ಹಾಗೂ ಬೇರೆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಯುತರು ಹರಪ್ಪನಹಳ್ಳಿ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿ ಬಿಜೆಪಿ ಯುವಮೋರ್ಚಾ ಅಧ್ಯಕ್ಷರಾಗಿ ದಾವಣಗೆರೆಯಲ್ಲಿ ಬಿಜೆಪಿ ಪಕ್ಷದ ಉಪಾಧ್ಯಕ್ಷರಾಗಿ ರಾಜ್ಯಪರಿಷತ್ ಸದಸ್ಯರಾಗಿ ಹಾಗೂ ಹಾಲಿ ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಂಯುಕ್ತ ಸಹಕಾರಿ ದಾವಣಗೆರೆಯಲ್ಲಿ ಪ್ರತಿನಿಧಿಯಾಗಿ ಆಡಳಿತ ಮಂಡಳಿಯಲ್ಲಿ ಉತ್ತಮ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ■

**LEADER OF LEADERS - KARNATAKA STATE SOUHARDA FEDERAL CO-OP-LTD BANGALORE**

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತೀಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ. ಕಾರಕೂನ | 9482734077 |
| ಕಾನೂನು ವಿಭಾಗದ ಅಧಿಕಾರಿ | ಶ್ರೀ ಶ್ರೀಕಾಂತ | 9916814888 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು - 10.
web : www.souharda.coop,
E-mail : souharada@souharada.coop,
ದೂ.ಸಂ : 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : ಶರಣಗೌಡ ಜಿ. ಪಾಟೀಲ
ಸಂಚಿಕೆ ಸಿದ್ಧತೆ : ವಿ.ಜಿ.ಕಾರಕೂನ
ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ - 1, ದೂ. 0831-2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ನಂ. ಡಿ-02, 1ನೇ ಮಹಡಿ, ಶ್ರೀ ಗಜಾನನ ಫ್ಲಾವರ್ ವ್ಯಾಲಿ, ಗುಡ್-ಲಕ್ ಹೋಟೆಲ್ ಎದುರು, ಖೂಭಾ ಪ್ಲಾಟ್, ಗುಲಬರ್ಗಾ- 585103. ದೂ;08472-270222, ಮೊ : 9900990268

ಅಂತರರಾಷ್ಟ್ರೀಯ
ಸಹಕಾರಿಗಳ ವರ್ಷ – 2012

# ಸ್ವಾಭಿಮಾನಿ ಸಹಕಾರಿ


ಆಗಸ್ಟ್ – 2012

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಪುಟ 10 * ಸಂಚಿಕೆ 08 * ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ * ವಾರ್ಷಿಕ ಚಂದಾ 100/– * ಬೆಲೆ ರೂ. 12/–



ನೂತನ ರಾಷ್ಟ್ರಪತಿ
ಶ್ರೀ ಪ್ರಣಬ್ ಮುಖರ್ಜಿ ಅವರಿಗೆ
ಹೃತ್ಪೂರ್ವಕ ಅಭಿನಂದನೆಗಳು



ನೂತನ ಉಪರಾಷ್ಟ್ರಪತಿ
ಶ್ರೀ ಹಮೀದ್ ಅನ್ಸಾರಿ ಅವರಿಗೆ
ಹೃತ್ಪೂರ್ವಕ ಅಭಿನಂದನೆಗಳು

## ನಾಡಿನ ಜನತೆಗೆ 65ನೇ ಸ್ವಾತಂತ್ರ್ಯೋತ್ಸವದ ಶುಭಾಶಯಗಳು



ಶ್ರೀಕೃಷ್ಣ ಜನಾಷ್ಟಮಿ
ಹಾಗೂ ರಂಜಾನ್
ಶುಭಾಶಯಗಳು



– ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ.




ಲಂಡನ್ ಒಲಂಪಿಕ್ – 2012 : ಪದಕ ವಿಜೇತ ಭಾರತೀಯ ಕ್ರೀಡಾಪಟುಗಳಿಗೆ ಅಭಿನಂದನೆಗಳು

ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ........2
ಸೌಹಾರ್ದ ಸಹಕಾರಿ ಸಮಾಚಾರಗಳು........3,4,5,67,8
ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ........9
ಲೇಖನಗಳು........13,14,15,17,18
ತರಬೇತಿ ಕಾರ್ಯಾಗಾರ........10,11
ಪತ್ರಿಕೆ ಕುರಿತ ಅನಿಸಿಕೆಗಳು........16
ಸುದ್ದಿ, ಷೇರು ಚೂರು–ಪಾರು........19
ಸಂಯುಕ್ತ ಸಹಕಾರಿ ನಿರ್ದೇಶಕರ ಪರಿಚಯ........20

ಸೌಹಾರ್ದ ಸಹಕಾರಿಗಳ ಸಂಖ್ಯೆ : 2165 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 456



ಪಾರದರ್ಶಕತೆ ಸಹಕಾರಿಯ ಆಡಳಿತದ ಕೈಗನ್ನಡಿ. ಸಹಕಾರಿ ಸಂಸ್ಥೆಗಳು ಯಾರೊಬ್ಬರ ಅಥವಾ ಒಂದು ಕುಟುಂಬದ ಸ್ವತ್ತಾಗಬಾರದು, ಅವು ಸಾರ್ವಜನಿಕರ ಸ್ವತ್ತು. ಸಹಕಾರಿ ಆಗುಹೋಗುಗಳಲ್ಲಿ ಎಲ್ಲರೂ ಸಮಾನ ಭಾಗಿಗಳು ಎಂಬ ಮೂಲ ತತ್ವವನ್ನು ಎಲ್ಲರೂ ಅರಿಯುವಂತಾಗಬೇಕು. ಸಹಕಾರಿಯ ಆಡಳಿತವನ್ನು ವಿಶ್ಲೇಷಿಸಿದಾಗ ಮೂಲದಲ್ಲಿ ಸದಸ್ಯರು ನಂತರದಲ್ಲಿ ಆಡಳಿತ ಮಂಡಳಿ, ಪದಾಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರು ಮಹತ್ವದ ಪಾತ್ರ ನಿರ್ವಹಣೆಯ ಕಾರ್ಯವಿದೆ.

# ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಗುಣಮಟ್ಟ ನಿರ್ವಹಣೆ

ಆತ್ಮೀಯರೇ,

65ನೇ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು.

ನಮ್ಮ ದೇಶಕ್ಕೆ ಸ್ವಾತಂತ್ರ ತಂದುಕೊಟ್ಟ ಗಾಂಧೀಜಿಯವರು "ನಮಗೆ ರಾಜಕೀಯ ಸ್ವಾಂತಂತ್ರ ಬಂದಿದೆ. ಇನ್ನು ನಾವು ಆರ್ಥಿಕ ಸ್ವಾತಂತ್ರ ಗಳಿಸಬೇಕಿದೆ. ಆರ್ಥಿಕ ಸ್ವಾತಂತ್ರಕ್ಕೆ ಸಹಕಾರವೇ ಹೆಬ್ಬಾಗಿಲು ನಾವು ಇಂದು ಸಹಕಾರ ಕ್ಷೇತ್ರವನ್ನು ಬಲಪಡಿಸಬೇಕಿದೆ" ಎಂದು ಹೇಳಿರುವ ಮಾತನ್ನು ಈ ಸಂದರ್ಭದಲ್ಲಿ ನೆನೆಯುತ್ತ ಸಹಕಾರ ಕ್ಷೇತ್ರದಲ್ಲಿ ಅಭಿವೃದ್ಧಿಗೆ ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಗುಣಮಟ್ಟ ನಿರ್ವಹಣೆಯ ಬಗ್ಗೆ ಕೆಲವು ಅನಿಸಿಕೆಗಳನ್ನು ತಮ್ಮೊಡನೆ ಹಂಚಿಕೊಳ್ಳಬಯಸಿದ್ದೇನೆ.

ಸಹಕಾರಿ ಕ್ಷೇತ್ರದ ಸಾಧನೆಯ ವೈಫಲ್ಯಗಳ, ಅವಕಾಶಗಳ ಮತ್ತು ಅಭಿವೃದ್ಧಿಯ ಬಗ್ಗೆ ಸಾಮಾನ್ಯವಾಗಿ ಎಲ್ಲ ವೇದಿಕೆಗಳಲ್ಲಿ ಚರ್ಚೆಯಾಗುವುದು ಎಲ್ಲರಿಗೂ ತಿಳಿದ ವಿಷಯ. ಸಹಕಾರಿ ಕ್ಷೇತ್ರ ನಿರೀಕ್ಷಿಸಿದ ಸಾಧನೆಯನ್ನು ಸಾಧಿಸಲು ಸಾಧ್ಯವಾಗಿಲ್ಲ ಎಂಬುದು ಸಾಮಾನ್ಯ ಅಭಿಪ್ರಾಯ. ಆದರೆ ಅನೇಕ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಜ್ವಲಂತ ಉದಾಹರಣೆಗಳು ಲಭ್ಯವಿವೆ. ಇವೆಲ್ಲ ಮಾದರಿ ಸಹಕಾರಿ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಈ ಸಹಕಾರಿ ಸಂಸ್ಥೆಗಳ ಸಾಧನೆಗೆ ಹಾಗೂ ಉಳಿದ ಕೆಲವು ಸಹಕಾರಿಗಳ ವೈಫಲ್ಯತೆಗೆ ಕಾರಣಗಳನ್ನು ಅವಲೋಕಿಸಿದಾಗ ಕಂಡುಬರುವುದು ಆಡಳಿತದಲ್ಲಿ ಪಾರದರ್ಶಕತೆಯ ಅಭಾವ.

ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುವಂತಾಗಬೇಕಾದರೆ ಪ್ರಥಮ ಆದ್ಯತೆ ಪಾರದರ್ಶಕ ಆಡಳಿತಕ್ಕೆ ಹೆಚ್ಚು ಮಹತ್ವ ಕೊಡುವುದು ಅಗತ್ಯ. ಪಾರದರ್ಶಕತೆ ಸಹಕಾರಿಯ ಆಡಳಿತದ ಕೈಗನ್ನಡಿ. ಸಹಕಾರಿ ಸಂಸ್ಥೆಗಳು ಯಾರೊಬ್ಬರ ಅಥವಾ ಒಂದು ಕುಟುಂಬದ ಸ್ವತ್ತಾಗಬಾರದು, ಅವು ಸಾರ್ವಜನಿಕರ ಸ್ವತ್ತು. ಸಹಕಾರಿ ಆಗುಹೋಗುಗಳಲ್ಲಿ ಎಲ್ಲರೂ ಸಮಾನ ಭಾಗಿಗಳು ಎಂಬ ಮೂಲ ತತ್ವವನ್ನು ಎಲ್ಲರೂ ಅರಿಯುವಂತಾಗಬೇಕು. ಸಹಕಾರಿಯ ಆಡಳಿತವನ್ನು ವಿಶ್ಲೇಷಿಸಿದಾಗ ಮೂಲದಲ್ಲಿ ಸದಸ್ಯರು ನಂತರದಲ್ಲಿ ಆಡಳಿತ ಮಂಡಳಿ, ಪದಾಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರು ಮಹತ್ವದ ಪಾತ್ರ ನಿರ್ವಹಣೆಯ ಕಾರ್ಯವಿದೆ. ಜವಾಬ್ದಾರಿಯನ್ನು ಒಬ್ಬರು ಇನ್ನೊಬ್ಬರಿಗೆ ವರ್ಗಾಯಿಸುವುದಲ್ಲ. ನಿಯಮಾನುಸಾರ ಅಥವಾ ಸೂಕ್ತ ವ್ಯವಸ್ಥೆಯಡಿಯಲ್ಲಿ ಅಧಿಕಾರವನ್ನು ವಿಕೇಂದ್ರೀಕರಿಸಬಹುದು.

ವಾರ್ಷಿಕ ಸಾಮಾನ್ಯ ಸಭೆ ಅತ್ಯಂತ ಮಹತ್ವದ ಸಭೆ. ಸಹಕಾರಿಯ ಆಗುಹೋಗುಗಳ ಬಗ್ಗೆ ಸದಸ್ಯರಿಗೆ ಅಂತಿಮ ಅಧಿಕಾರವಿದೆ ಎಂಬ ಬಗ್ಗೆ ಎಲ್ಲ ಸದಸ್ಯರಿಗೆ ಅರಿವು ಮೂಡಿಸಿ ಹೆಚ್ಚಿನ ಸದಸ್ಯರು ಸಭೆಯಲ್ಲಿ ಪಾಲುಗೊಳ್ಳುವಂತಾಗಬೇಕು. ಸದಸ್ಯರು ಸಭೆಯಲ್ಲಿ ಪಾಲುಗೊಳ್ಳಲು ಸಹಕಾರಿಯಲ್ಲಿ ಕನಿಷ್ಠ ವ್ಯವಹಾರ ಮಾಡಿರಬೇಕು ಎಂಬ ಬಗ್ಗೆ ಅರಿವು ಮೂಡಿಸುವುದು ಅವಶ್ಯಕ. ಈ ನಿಟ್ಟಿನಲ್ಲಿ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿಯವರು ಅಗತ್ಯ ಕ್ರಮಗಳನ್ನು ನಿರಂತರವಾಗಿ ಜರುಗಿಸಬೇಕಾಗುತ್ತದೆ. ಇದಕ್ಕಾಗಿ ಸದಸ್ಯರು ಸಹಕಾರಿಯ ಜೊತೆಗೆ ನಿರಂತರ ಸಂಪರ್ಕ ಹೊಂದುವಂತಹ ಕ್ರಮಗಳನ್ನು ಹಮ್ಮಿಕೊಳ್ಳುವುದು ಅವಶ್ಯಕ. ಪಾರದರ್ಶಕ ಆಡಳಿತದ ಹಾಗೂ ಗುಣಮಟ್ಟ ನಿರ್ವಹಣೆಯ ಮೊದಲ ಹಂತ ಇದು.

ಸಹಕಾರಿಗೆ ಆಕರ್ಷಕ ಹಾಗೂ ಸ್ವಚ್ಛ ಆವರಣ. ಒಳಾಂಗಣದಲ್ಲಿ ಉತ್ತಮ ಮರಮುಟ್ಟುಗಳು, ಗಣಕೀಕರಣ ಹಾಗೂ ಆಧುನಿಕ ಸೌಲಭ್ಯ ಹಾಗೂ ಸಲಕರಣೆಗಳನ್ನು ಅಳವಡಿಸುವುದು, ಸಿಬ್ಬಂದಿಯವರು ತಮ್ಮ ವ್ಯಕ್ತಿತ್ವವನ್ನು ಆಕರ್ಷಕವಾಗಿಟ್ಟುಕೊಳ್ಳುವುದರ ಜೊತೆಗೆ ನಗುಮುಖದ ಸೇವೆ, ನಿರ್ದೇಶಕರುಗಳು ಎಲ್ಲ ಸಭೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದು, ನಿಗದಿತ ಸಮಯದಲ್ಲಿ ಲೆಕ್ಕಪರಿಶೋಧನೆ ಮಾಡಿಸುವುದು, ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಪ್ರತಿದಿನ ಅಥವಾ ನಿಗದಿತ ದಿನಗಳಂದು ಸದಸ್ಯರ ಅಹವಾಲುಗಳಿಗೆ ಸ್ಪಂದಿಸುವುದು, ಸ್ಥಳದಲ್ಲಿಯೆ ಪರಿಹಾರಗಳನ್ನು ಒದಗಿಸುವುದು, ಠೇವಣಿ ಸ್ವೀಕರಿಸುವಾಗ ಅಥವಾ ಸಾಲ ನೀಡುವಾಗ ಯಾವುದೇ ರೀತಿಯ ತಾರತಮ್ಯ ಮಾಡದೇ ಇರುವುದು, ಪಕ್ಷಪಾತಗಳಿಗೆ ಅವಕಾಶ ನೀಡದೇ ಇರುವುದು, ಸ್ವಹಿತಕ್ಕಿಂತ ಸದಸ್ಯರ ಹಿತರಕ್ಷಣೆಗೆ ಆದ್ಯತೆ ನೀಡುವುದು, ಸದಸ್ಯರಿಗೆ ನೀಡುವ ಸೌಲಭ್ಯಗಳನ್ನು ಪಟ್ಟಿಮಾಡಿ ಫಲಕಗಳ ಮುಖೇನ ಸಹಕಾರಿಯ ಹೊರಾಂಗಣ ಅಥವಾ ಒಳಾಂಗಣದಲ್ಲಿ ಪ್ರದರ್ಶಿಸುವುದು, ಸಹಕಾರಿಯ ಸಾಧನೆಗಳನ್ನು ಸೌಲಭ್ಯಗಳ ಭಿತ್ತಿ ಪತ್ರ ಹಾಗೂ ಕರಪತ್ರಗಳ ಮುದ್ರಣ ವಿತರಿಸುವ ವ್ಯವಸ್ಥೆ ಹಾಗೂ ಆಗಿಂದಾಗ್ಗೆ ಸಭೆ ಸಮಾರಂಭಗಳನ್ನು ಏರ್ಪಡಿಸಿ ಸದಸ್ಯರಿಗೆ ತಿಳುವಳಿಕೆ ನೀಡುವುದು ಇವು ಕೆಲವು ಆಡಳಿತದಲ್ಲಿ ಪಾರದರ್ಶಕ ಹಾಗೂ ಗುಣಮಟ್ಟ ನಿರ್ವಹಣೆಯ ವಿಷಯಗಳು. ಇವುಗಳ ಜೊತೆಗೆ ಇನ್ನೂ ಅಗತ್ಯವಿರುವ ವಿಷಯಗಳನ್ನು ಅಳವಡಿಸಲು ಅವಕಾಶವಿದೆ.


ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಇವು ಅಗತ್ಯ. ಇವುಗಳನ್ನು ಅಳವಡಿಸುವುದು ಅವಶ್ಯಕ.

– ಎಸ್.ಆರ್. ಸತೀಶ್‌ಚಂದ್ರ
ಅಧ್ಯಕ್ಷರು

## ಷೇರುಪೇಟೆಗೆ ದಾಖಲೆ ವಿದೇಶಿ ಹೂಡಿಕೆ

ಕಳೆದ ಕೆಲ ತಿಂಗಳಿನಿಂದ ಏರಿಳಿಕೆ ಕಂಡು ಆತಂಕ ಸೃಷ್ಟಿಸಿದ ಷೇರುಪೇಟೆ ಮುಂಗಾರು, ಆರ್ಥಿಕ ಅಸ್ಥಿರತೆ ವೈಫಲ್ಯಗಳ ನಡುವೆಯೂ ವಿದೇಶಿ ಹೂಡಿಕೆದಾರರ ಮೆಚ್ಚುಗೆಗಳಿಸಿದೆ. ಅದರ ಫಲವಾಗಿ ಕಳೆದ ಒಂದೇ ತಿಂಗಳಿನಲ್ಲಿ ಎಫ್‌ಐಐ-ವಿದೇಶಿ ಹೂಡಿಕೆದಾರರು ರೂ. 49,557 ಕೋಟಿ ಮೌಲ್ಯದ ಷೇರು ಖರೀದಿಸಿದ್ದಾರೆ. ಇದರಿಂದ ನಿವ್ವಳ ಹೂಡಿಕೆ ರೂ. 10,273 ಕೋಟಿಗೆ ಏರಿದೆ. ಇದು ವಿದೇಶಿ ಹೂಡಿಕೆದಾರರು ಇಲ್ಲಿನ ಷೇರು ಪೇಟೆ ಮೇಲೆ ಇರಿಸಿರುವ ಭರವಸೆ. ಚಿದಂಬರಂ ಹಣಕಾಸು ಸಚಿವರಾದ್ದರಿಂದ ಸರ್ಕಾರ ಸಾಕಷ್ಟು ಆರ್ಥಿಕ ಸುಧಾರಣೆಗಳನ್ನು ಕೈಗೊಳ್ಳಲಿದೆ ಎನ್ನು ವಿಶ್ವಾಸದ ಫಲ.

ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಚಿದಂಬರಂ ಅವರು ಬ್ಯಾಂಕ್ ಬಡ್ಡಿದರ ಇಳಿಸುವ, ಹಣದುಬ್ಬರ ನಿಯಂತ್ರಿಸುವ ಸೂಕ್ತ ಕ್ರಮಗಳಿಗೆ ಮುಂದಾಗಿದ್ದಾರೆ. ಅಲ್ಲದೆ ಮ್ಯೂಚುವಲ್ ಫಂಡ್-ವಿಮಾ ಕ್ಷೇತ್ರಕ್ಕೆ ಹೆಚ್ಚಿನ ಹೂಡಿಕೆ ಹರಿದು ಬರುವಂತಾ ಕ್ರಮಗಳಿಗೆ ಮುಂದಾಗುವ ಚಿಂತನೆ ವ್ಯಕ್ತಪಡಿಸಿದ್ದಾರೆ ಹಾಗೂ ಹೂಡಿಕೆದಾರರಲ್ಲಿ ವಿಶ್ವಾಸ ಮೂಡಿಸಲು ತೆರಿಗೆ ನೀತಿ ಪರಿಷ್ಕರಿಸುವ ಸೂಚನೆ ನೀಡಿದ್ದಾರೆ. ಇದೆಲ್ಲದರ ಫಲಿತಾಂಶ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 304 ಅಂಶ ಏರಿಕೆಯಾಗಿ, 17 ಸಾವಿರದ ಗಡಿ ದಾಟಿ ಹರ್ಷ ಮೂಡಿದೆ.




## ಗೋಲ್ಡ್ ಫಂಡ್



ಜಗತ್ತಿನೆಲ್ಲೆಡೆ ಜನ ಒಲಿಂಪಿಕ್ಸ್‌ನ ಚಿನ್ನದ ಪದಕದ ಮೇಲೆ ಕಣ್ಣಿಟ್ಟಿದ್ದರೆ, ಭಾರತೀಯರು ಮಾತ್ರ ಚಿನ್ನದ ಮೇಲೇ ಕಣ್ಣಿಟ್ಟಿದ್ದಾರೆ. ಇದರ ಫಲವಾಗಿ ಇಲ್ಲಿ ಚಿನ್ನ ರೂ. 30,000 ದರದ ಅಂಚಿನಲ್ಲೇ ಅತ್ತಿತ್ತ ಸರಿಯುತ್ತಿದೆ. ಭಾರತೀಯರ ಈ ವ್ಯಾಮೋಹವನ್ನು ಅರಿತ ಬ್ಯಾಂಕುಗಳು ಚಿನ್ನದ ಮೇಲಿನ ಹೂಡಿಕೆಗೆ ಹಲವು ಯೋಜನೆಗಳನ್ನು ಪ್ರಕಟಿಸುತ್ತಿವೆ. ಕಳೆದ ವಾರ ಐಡಿಬಿಪಿ ಗೋಲ್ಡ್ ಫಂಡ್ ಯೋಜನೆ ಆರಂಭಿಸಿದೆ. ಈ ಯೋಜನೆಯಲ್ಲಿ ಹೂಡಿಕೆ ಮಾಡ ಬಯಸುವವರು ಕನಿಷ್ಠ ರೂ 5000 ಒಂದೇ ಬಾರಿ ಹೂಡಿಕೆ ಮಾಡಬಹುದಾಗಿದೆ ಅಥವಾ 3 ತಿಂಗಳ ಕಂತಿನಲ್ಲೂ ಪಾವತಿಸಬಹುದಾಗಿದೆ. ಹೂಡಿಕೆ ದಿನದ ದರದಲ್ಲಿ ಚಿನ್ನ ಖರೀದಿಸಿ, ಮರುಪಾವತಿ ಬಯಸಿದಾಗ ಅಂದಿನ ದಿನದ ಧಾರಣೆಗೆ ಅನುಗುಣವಾಗಿ ಹಿಂಪಾವತಿ ಮಾಡಲಾಗುತ್ತದೆ.

## ಹೆಚ್ಚಳಗೊಂಡ ವಿದೇಶ ವಿನಿಮಯ ಸಂಗ್ರಹ

ಕಳೆದ ಹಲವು ತಿಂಗಳಿಂದ ತೀವ್ರ ಕುಸಿತ ಕಂಡಿದ್ದ ವಿದೇಶಿ ವಿನಿಮಯ ಸಂಗ್ರಹ ಒಂದೆರಡು ವಾರಗಳಲ್ಲಿ ಉತ್ತಮಗೊಳ್ಳುತ್ತಾ ಸಾಗಿದೆ. ಹಿಂದಿನ ವಾರದಲ್ಲಿ 58.90 ಕೋಟಿ ಡಾಲರ್‌ನಷ್ಟು ಹೆಚ್ಚಳವಾಗಿದ್ದರೆ, ಈಗ ಅದು 131 ಕೋಟಿಯಷ್ಟು ಏರಿಕೆ ಕಂಡಿದೆ. ಇದರಿಂದ ಸತತವಾಗಿ ಅಪಮೌಲ್ಯಗೊಳ್ಳುತ್ತಾ ಸಾಗಿದ್ದ ರೂಪಾಯಿ ತನ್ನ ಮೌಲ್ಯವನ್ನು ಹೆಚ್ಚಿಸಿಕೊಳ್ಳುತ್ತಾ ಸುಧಾರಿಸಿಕೊಳ್ಳುತ್ತಿದೆ.

ಈ ತಿಂಗಳ ಮೊದಲ ವಾರದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಬಳಿ ವಿವಿಧ ದೇಶಗಳ ನಗದು ಪ್ರಮಾಣ ಒಟ್ಟು 28,864 ಕೋಟಿ ಡಾಲರ್‌ನ ಮೌಲ್ಯದಷ್ಟು ಇದೆ. ಭಾರತೀಯರ ಚಿನ್ನದ ದಾಹ ಹೆಚ್ಚುತ್ತಲೆ ಇರುವುದರಿಂದ, ಅಪಾರ ಪ್ರಮಾಣದ ಚಿನ್ನವನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಇದರಿಂದ ವಿದೇಶಿ ವಿನಿಮಯ ಸಂಗ್ರಹದ ಮೇಲೆ ಭಾರಿ ಒತ್ತಡ ಇರುವುದು ಆತಂಕದ ವಿಷಯವೆ.

## ಕರೆದು ಕರ ಕೊಡಿ

ಆದಾಯ ತೆರಿಗೆ ಸಲ್ಲಿಸುವವರು ಅರ್ಜಿಯಲ್ಲಿ ತುಂಬುವ ಮಾಹಿತಿಯಲ್ಲಿ ಮಾಡುವ ಸಣ್ಣಪುಟ್ಟ ತಪ್ಪುಗಳಿಂದ ಅವರಿಗೆ ಸಕಾಲದಲ್ಲಿ ಸಲ್ಲಬೇಕಾದ ಮರುಪಾವತಿ ವರ್ಷಗಳಷ್ಟು ವಿಳಂಬವಾಗುತ್ತಿದೆ. ಇದನ್ನು ತಪ್ಪಿಸಲು ಆನ್‌ಲೈನ್ ಮೂಲಕ ಸಲ್ಲಿಸಬಹುದಾದರೂ, ಅದಕ್ಕಾಗಿ ಕಂಪ್ಯೂಟರ್ ಸಾಮಾನ್ಯ ಜ್ಞಾನದ ಅಗತ್ಯವಿದೆ. ಇದಕ್ಕಾಗಿ ಆದಾಯತೆರಿಗೆ ಇಲಾಖೆ ಹೊಸ ಯೋಜನೆಯೊಂದನ್ನು ರೂಪಿಸಿದೆ. trpscheme.com ಜಾಲತಾಣ ಸಿದ್ಧಪಡಿಸಿದೆ. ಇದರಲ್ಲಿ ತೆರಿಗೆದಾರರು ಆನ್‌ಲೈನ್ ಸಹಾಯ ಪಡೆದು ಅದರ ನಿರ್ದೇಶನದಂತೆ ಮಾಹಿತಿ ಭರ್ತಿ ಮಾಡಬಹುದು ಅಥವಾ 'ಮನೆಗೆ ಭೇಟಿ' ಕ್ಲಿಕ್ ಮಾಡಿದಲ್ಲಿ ನಿಮ್ಮಲ್ಲಿಗೆ ತೆರಿಗೆ ಸಲಹೆಗಾರರು ಬಂದು ನಿಮ್ಮಿಂದ ಮಾಹಿತಿ ಪಡೆದು ಅರ್ಜಿ ಸಿದ್ಧಪಡಿಸಿ ಕರ ಪಡೆದುಕೊಳ್ಳುತ್ತಾರೆ. ಅದಕ್ಕಾಗಿ ಪ್ರತಿಯಾಗಿ ರೂ. 250 ಶುಲ್ಕ ತೆರಬೇಕಾಗುತ್ತದೆ. ಇದರಿಂದ ತಪ್ಪುಗಳಾಗುವುದು ತಪ್ಪಿ ಸಕಾಲದಲ್ಲಿ ಮರುಪಾವತಿ ನಿಮ್ಮ ಖಾತೆಗೆ ಜಮ ಆಗುತ್ತದೆ. ಸಧ್ಯ ಈ ಸೇವೆ ಬೆಂಗಳೂರು, ಚೆನ್ನೈ, ಪಾಟ್ನಾ, ಗುವಾಹತಿ, ಹೈದರಾಬಾದ್, ಮುಂಬೈ, ದೆಹಲಿಯ ತೆರಿಗೆದಾರರಿಗೆ ಲಭ್ಯವಿದೆ. ಈ ಬಾರಿ ತೆರಿಗೆ ಸಲ್ಲಿಸುವ ಕೊನೆ ದಿನವನ್ನು ತೆರಿಗೆ ಇಲಾಖೆ ಒಂದು ತಿಂಗಳು ಮುಂದೂಡಿ ಆಗಸ್ಟ್ 31ರವರೆಗೆ ವಿಸ್ತರಿಸಿದೆ.

## ನಮ್ಮ ಬ್ಯಾಂಕ್ ಖಾತೆಯಲ್ಲಿ ರೂ. 2400 ಕೋಟಿ!

ನಮ್ಮ ನಿಮ್ಮ ಉಳಿತಾಯ ಖಾತೆ, ಚಾಲ್ತಿ, ನಿಗದಿತ ಅವಧಿಗೆ ಇಟ್ಟ ಠೇವಣಿಗಳಲ್ಲಿನ ಕೇಳುವರಿಲ್ಲದ ಮೊತ್ತ ರೂ. 2400 ಕೋಟಿ. ದೇಶಾದ್ಯಂತ ವಿವಿಧ ಬ್ಯಾಂಕುಗಳ ವಿವಿಧ ಶಾಖೆಗಳ ಖಾತೆಗಳಲ್ಲಿ ಉಳಿದಿದೆ. ಯಾವುಯಾವುದೋ ಕಾರಣಗಳಿಂದ ದೀರ್ಘಕಾಲದಿಂದ ಚಾಲ್ತಿಯಲ್ಲಿಲ್ಲದ ಈ ಹಣವನ್ನು ವಾರಸುದಾರರನ್ನು ಪತ್ತೆ ಹಚ್ಚಿ ಅವರಿಗೆ ಹಿಂತಿರುಗಿಸುವಂತೆ ರಿಸರ್ವ್ ಬ್ಯಾಂಕ್ ತಿಳಿಸಿದೆ. ಖಾತೆದಾರರು ಬಯಸಿದಲ್ಲಿ ಅದನ್ನು ಯಾವುದೇ ಶುಲ್ಕ ವಿಧಿಸದೆ ಮರು ಚಲಾವಣೆ ಮಾಡುವಂತೆಯೂ ಸೂಚಿಸಿದೆ.

ಲೇಖನ



# ಆದಾಯ ತೆರಿಗೆ ಸಲ್ಲಿಸುವ ಸಮಯ

ಎಚ್. ಶಿವಕುಮಾರ್, ಚಾರ್ಟರ್ಡ್ ಅಕೌಂಟೆಂಟ್

ಜುಲೈ–ಆಗಸ್ಟ್–ಸೆಪ್ಟೆಂಬರ್ ತಿಂಗಳು ಬಂತೆಂದರೆ ಅದು ಆದಾಯ ತೆರಿಗೆ ರಿಟರ್ನ್‌ಗಳನ್ನು ಸಲ್ಲಿಸುವ ಸಮಯ. ಈ ಬಾರಿ ಜುಲೈ 31ಕ್ಕೆ ಅಂತ್ಯವಾಗುವ ಆದಾಯ ತೆರಿಗೆ ರಿಟರ್ನ್ ಸಲ್ಲಿಸುವ ಸಮಯವನ್ನು ಆಗಸ್ಟ್ ಅಂತ್ಯದವರೆಗೆ ವಿಸ್ತರಿಸಲಾಗಿದೆ. ಹಾಗೆಯೇ ಸೆಪ್ಟೆಂಬರ್ ಮುಗಿಯುವುದರೊಳಗೆ ಎಲ್ಲಾ ತೆರಿಗೆದಾರರೂ ತಮ್ಮ ತೆರಿಗೆ ರಿಟರ್ನ್‌ಗಳನ್ನು ಸಲ್ಲಿಸಬೇಕಾಗುತ್ತದೆ. ತದನಂತರ ಸಲ್ಲಿಸುವ ತೆರಿಗೆ ರಿಟರ್ನ್‌ಗಳಿಗೆ ಬಡ್ಡಿ ಮತ್ತು ದಂಡವನ್ನು ವಿಧಿಸುವ ಅವಕಾಶವಿದೆ.

ಕಳೆದ ಹಲವು ವರ್ಷಗಳಿಂದ ತೆರಿಗೆ ರಿಟರ್ನ್‌ಗಳನ್ನು ಸಲ್ಲಿಸುವಲ್ಲಿ ಗಮನಾರ್ಹ ಬದಲಾವಣೆಗಳಾಗಿದೆ. ಒಂದು ಕಾಲದಲ್ಲಿ ಏಳೆಂಟು ಪುಟಗಳ ಪುಸ್ತಕ ರೂಪದ ಆದಾಯ ತೆರಿಗೆ ರಿಟರ್ನ್‌ಗಳಿದ್ದು ನಂತರ ಒಂದೇ ಪುಟದ ಫಾರಂ ಮಾದರಿಯಲ್ಲಿ ತೆರಿಗೆ ರಿಟರ್ನ್‌ಗಳನ್ನು ರೂಪಿಸಲಾಯಿತು. ಅಲ್ಲಿಂದೀಚೆಗೆ ಸಂಪೂರ್ಣವಾಗಿ ಗಣಕೀಕೃತಗೊಂಡ ಆದಾಯ ತೆರಿಗೆ ಇಲಾಖೆಯು ಈಗ ಎಲ್ಲಾ ತರಹದ ರಿಟರ್ನ್‌ಗಳನ್ನು ಕಂಪ್ಯೂಟರ್ ಅಂತರ್ಜಾಲದ ಮೂಲಕವೇ ಸಲ್ಲಿಸುವಂತ ಏರ್ಪಾಟುಮಾಡಿದೆ. ಆರಂಭದಲ್ಲಿ ಅನೇಕ ಅವಘಡಗಳಿಗೆ ಕಾರಣವಾಗಿದ್ದು ಈ ಹೊಸ ವ್ಯವಸ್ಥೆಯು ಈಗ ತಹಬದಿಗೆ ಬಂದಿದ್ದು ಅತ್ಯಧಿಕ ಸಂಖ್ಯೆಯ ತೆರಿಗೆದಾರರು ಕಂಪ್ಯೂಟರ್ ಅಂತರ್ಜಾಲದ ಮೂಲಕವೇ ತೆರಿಗೆ ರಿಟರ್ನ್ ಸಲ್ಲಿಸಲು ಸುಗಮವಾಗಿದೆ. 2010–11ರಲ್ಲಿ 90,50,242 ಮತ್ತು 2012–13ರಲ್ಲಿ 1,64,33,683 ರಿಟರ್ನ್‌ಗಳು ಕಂಪ್ಯೂಟರ್ ಅಂತ ರ್ಜಾಲದ ಮೂಲಕ ಸಲ್ಲಿಕೆಯಾಗಿವೆ ಎಂದು ಆದಾಯ ತೆರಿಗೆ ಇಲಾಖೆಯ ಪ್ರಕಟಣೆಯೊಂದು ತಿಳಿಸುತ್ತದೆ.




ಸಂಬಳದ ಆದಾಯವಿರುವವರು ಮತ್ತು ವಾರ್ಷಿಕ 60 ಲಕ್ಷ ರೂಪಾಯಿಗಿಂತಲೂ ಕಡಿಮೆ ವಹಿವಾಟು ನಡೆಸುವ ವ್ಯಾಪಾರ ಸಂಸ್ಥೆಗಳು ಜುಲೈ 31ರೊಳಗೆ ತಮ್ಮ ಆದಾಯ ತೆರಿಗೆ ರಿಟರ್ನ್ ಸಲ್ಲಿಸಬೇಕಾಗುತ್ತದೆ. ವಾರ್ಷಿಕ 60 ಲಕ್ಷ ರೂಪಾಯಿ ವಹಿವಾಟು ಮೀರಿದ ಸಂಸ್ಥೆಯವರು ಸೆಪ್ಟೆಂಬರ್ 30ರವರೆಗೂ ರಿಟರ್ನ್‌ಗಳನ್ನು ಸಲ್ಲಿಸಬಹುದು.

ಆದಾಯ ತೆರಿಗೆ ರಿಟರ್ನ್‌ಗಳನ್ನು ಸಲ್ಲಿಸುವಲ್ಲಿ, ಸಹಕಾರಿ ಸಂಸ್ಥೆಗಳು ಅಂತಹ ಉತ್ಸುಕತೆಯನ್ನು ತೋರದಿರುವುದು ಕಳೆದ ಹಲವು ವರ್ಷಗಳಿಂದಲೂ ನಡೆದು ಬಂದಂತಿದೆ. ಸಹಕಾರಿ ಸಂಘಸಂಸ್ಥೆಗಳು ಯಾರ ವೈಯಕ್ತಿಕ ಲಾಭಕ್ಕೂ ಕೆಲಸ ಮಾಡದೆ ಇರುವುದರಿಂದ ಅವು ಆದಾಯ ತೆರಿಗೆಯಿಂದ ಎಲ್ಲಾ ಕಾಲಕ್ಕೂ ವಿನಾಯಿತಿ ಪಡೆದೇ ತೀರುತ್ತವೆ ಎಂಬ ತಪ್ಪು ಕಲ್ಪನೆ ಕೂಡ ಇಂತಹ ಪರಿಸ್ಥಿತಿಗೆ ಕಾರಣವಾಗಿದೆ. ಆದಾಯ ತೆರಿಗೆ ಇಲಾಖೆ ನೀಡುವ ಪಾನ್ ನಂಬರನ್ನು ಪಡೆದ ಸಹಕಾರಿ ಸಂಘ ಸಂಸ್ಥೆಗಳು ತೆರಿಗೆ ರಿಟರ್ನ್ ಸಲ್ಲಿಸುವ ವಿಚಾರದಲ್ಲಿ ಮಾತ್ರ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳದೆ ಇರುವ ಸಂದರ್ಭಗಳು ಹಲವಾರು ಪ್ರಕರಣದಲ್ಲಿ ಕಂಡುಬಂದಿದೆ. ಇದಕ್ಕೆ ಸೂಕ್ತ ತಿಳುವಳಿಕೆ ಮತ್ತು ಮಾರ್ಗದರ್ಶನದ ಕೊರತೆ ಕೂಡ ಕಾರಣ ಎನ್ನಬಹುದು.

ಈ ಹಿನ್ನೆಲೆಯಲ್ಲಿ ಸಹಕಾರಿ ಸಂಸ್ಥೆಗಳು ತೆರಿಗೆ ರಿಟರ್ನ್ ಸಲ್ಲಿಸುವ ಕಾನೂನುಬದ್ಧ ಹೊಣೆಗಾರಿಕೆಯ ನೈಜ ಸ್ಥಿತಿಗತಿಗಳನ್ನು ಕುರಿತು ಒಂದಷ್ಟು ಮಾಹಿತಿಗಳನ್ನು ವಿಮರ್ಶೆ ಮಾಡುವುದು ಸೂಕ್ತ. ಮೊದಲನೆಯದಾಗಿ ಎಲ್ಲಾ ಸಹಕಾರಿ ಸಂಸ್ಥೆಗಳು ಆದಾಯ ತೆರಿಗೆ ಇಲಾಖೆ ನೀಡುವ ಪಾನ್ ನಂಬರನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಈಗಿನ ದಿನಗಳಲ್ಲಿ ಪಾನ್ ನಂಬರು ಇಲ್ಲದೇ ಯಾವುದೆ ರೀತಿಯ ದೊಡ್ಡ ಮೊತ್ತದ ಹಣಕಾಸು ವ್ಯವಹಾರಗಳನ್ನು ಮಾಡಲು ಸಾಧ್ಯವಿಲ್ಲ. ಒಂದು ಸಾರಿ ಪಾನ್ ನಂಬರನ್ನು ಪಡೆದ ಸಂಸ್ಥೆ ಸಾಮಾನ್ಯವಾಗಿ, ಕೆಲವೊಂದು ಸನ್ನಿವೇಶಗಳಲ್ಲಿ ಕಡ್ಡಾಯವಾಗಿ ಆದಾಯ ತೆರಿಗೆ ರಿಟರ್ನ್ ಸಲ್ಲಿಸಬೇಕಾಗುತ್ತದೆ. ವಾರ್ಷಿಕ ವ್ಯವಹಾರದಲ್ಲಿ ಲಾಭಗಳಿಸಿದ ಎಲ್ಲಾ ಸಹಕಾರ ಸಂಘ ಸಂಸ್ಥೆಗಳು ಆದಾಯ ತೆರಿಗೆ ರಿಟರ್ನ್ ಸಲ್ಲಿಸಬೇಕು. ಆದಾಯ ತೆರಿಗೆಯನ್ನು ಕಟ್ಟುವುದು ಅಥವಾ ವಿನಾಯಿತಿ ಪಡೆಯುವುದು ಇಲ್ಲಿ ಮುಖ್ಯವಲ್ಲ. ಒಂದು ಸಾರಿ ಪಾನ್ ನಂಬರು ಪಡೆದಿದ್ದ ಸಂಸ್ಥೆಯು ಲಾಭದಾಯಕವಾಗಿ ನಡೆಯುತ್ತಿದ್ದಲ್ಲಿ ಕಡ್ಡಾಯವಾಗಿ ಆದಾಯ ತೆರಿಗೆ ರಿಟರ್ನ್ ಸಲ್ಲಿಸಬೇಕು. ಆದಾಯ ತೆರಿಗೆ ರಿಟರ್ನ್ ತಯಾರಿಸುವಾಗ ಗಳಿಸಿದ ಲಾಭದ ಮೇಲೆ 80ಪಿ ಅನ್ವಯ ಸೂಕ್ತ ತೆರಿಗೆ ವಿನಾಯಿತಿಯನ್ನು ಲೆಕ್ಕ ಹಾಕಿ ಅದರ ಉಪಯೋಗ ಪಡೆಯುವ ಹಕ್ಕು ಮತ್ತು ಸ್ವಾತಂತ್ರ್ಯ ಎಲ್ಲಾ ಸಂಸ್ಥೆಗಳಿಗೂ ಇರುತ್ತದೆ.

ವಾರ್ಷಿಕ ರೂ. 60 ಲಕ್ಷಗಳಿಗೂ ಕಡಿಮೆ ವಹಿವಾಟು ನಡೆಸುವ ಸಂಸ್ಥೆಗಳಿಗೆ ಆಗಸ್ಟ್ 31ರವರೆಗೂ ಮತ್ತು ರೂ. 60 ಲಕ್ಷಕ್ಕೂ ಹೆಚ್ಚಿನ ವಹಿವಾಟು ನಡೆಸುವ ಸಂಸ್ಥೆಗಳಿಗೆ ಸೆಪ್ಟೆಂಬರ್ 30ರವರೆಗೂ ಕಾಲಾವಕಾಶವಿದೆ. ಪತ್ತಿನ ಸಹಕಾರ ಸಂಸ್ಥೆಗಳ ರೂ 60 ಲಕ್ಷ ರೂ ಮಿತಿಯ ವಹಿವಾಟನ್ನು ನಿರ್ಧರಿಸುವಾಗ ಸಂಗ್ರಹ ಮಾಡಿದ ಬಡ್ಡಿಯ ಮೊತ್ತವನ್ನು ಮಾತ್ರ ಪರಿಗಣಿಸಬೇಕಾಗುತ್ತದೆ.

ವಾರ್ಷಿಕ 60 ಲಕ್ಷ ರೂಪಾಯಿಗಳಿಗೆ ಮೀರಿದ ವಹಿವಾಟು ನಡೆಸುವ ಸಂಸ್ಥೆಯ ವಾರ್ಷಿಕ ಆಡಿಟ್ ವರದಿಯೊಂದಿಗೆ ಹೆಚ್ಚುವರಿಯಾಗಿ ವಾರ್ಷಿಕ ತೆರಿಗೆ ಆಡಿಟ್ ವರದಿಯನ್ನು ಕೂಡ ಪಡೆಯಬೇಕಾಗುತ್ತದೆ. ಇದು ಆದಾಯ ತೆರಿಗೆ ಕಾನೂನಿನ ಅನ್ವಯ ಕಡ್ಡಾಯ.

ಸಹಕಾರಿ ಸಂಘ ಸಂಸ್ಥೆಗಳು ಲಾಭದಾಯಕವಾಗಿ ವ್ಯವಹಾರ ನಿರ್ವಹಿಸುತ್ತಿದ್ದು ಪಾನ್ ನಂಬರು ಪಡೆದಿದ್ದ ಸಂದರ್ಭದಲ್ಲಿ ಆದಾಯ ತೆರಿಗೆ ರಿಟರ್ನ್ ಸಲ್ಲಿಸದೆ ಹೋದಲ್ಲಿ, 80ಪಿ ತೆರಿಗೆ ವಿನಾಯಿತಿ ಇದ್ದರೂ ಕೂಡ ವಾರ್ಷಿಕ 5000 ರೂಪಾಯಿಗಳ ದಂಡವನ್ನು ತೆರಬೇಕಾದ ಪರಿಸ್ಥಿತಿ ಇರುತ್ತದೆ.

ಇತ್ತೀಚಿಗೆ ಆದಾಯ ತೆರಿಗೆ ಇಲಾಖೆಯು ಹೊರತಂದಿರುವ "ಕಪ್ಪು ಹಣದ ಮೇಲಿನ ಶ್ವೇತ ಪತ್ರ"ದಲ್ಲಿ ಸಹಕಾರಿ ಸಂಘಸಂಸ್ಥೆಗಳಲ್ಲಿ ಕಪ್ಪು ಹಣದ ಚಲಾವಣೆ ಬಗ್ಗೆ ಕಳವಳವನ್ನು ವ್ಯಕ್ತಪಡಿಸಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಎಲ್ಲಾ ಸಹಕಾರಿ ಸಂಸ್ಥೆಗಳೂ ತಮ್ಮ ತೆರಿಗೆ ರಿಟರ್ನ್‌ಗಳನ್ನು ಸಲ್ಲಿಸುವ ಮತ್ತು ಕ್ರಮಬದ್ಧವಾಗಿ ತೆರಿಗೆ ವಿನಾಯಿತಿಗಳನ್ನು ಪಡೆಯುವ ವ್ಯವಸ್ಥೆ ಮಾಡಿಕೊಳ್ಳುವುದು ಸಮಯೋಚಿತ. ■



## ಅಭಿನಂದನೆಗಳು...

ನೂತನ ಮುಖ್ಯಮಂತ್ರಿ ಶ್ರೀ ಜಗದೀಶ್ ಶೆಟ್ಟರ್ ಅವರನ್ನು ಅಭಿನಂದಿಸುತ್ತಿರುವ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್‌ಚಂದ್ರ, ಉಪಾಧ್ಯಕ್ಷರು ಶ್ರೀ ಗುರುನಾಥ ಜ್ಯಾಂತೀಕರ್, ಹಾಗೂ ನಿರ್ದೇಶಕರಾದ ರಾವಸಾಹೇಬ್ ಅ. ಪಾಟೀಲ, ವಿಧಾನ ಪರಿಷತ್ ಸದಸ್ಯ ಶ್ರೀ ಅರುಣ ಸಹಾಪುರ.

# ಸಹಕಾರ ಸಚಿವ ಶ್ರೀ ಬಿ.ಜೆ. ಪುಟ್ಟಸ್ವಾಮಿ

ಕರ್ನಾಟಕ ಸರಕಾರದ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಜಗದೀಶ ಸೆಟ್ಟರ ನೇತೃತ್ವದ ನೂತನ ಸರಕಾರದಲ್ಲಿ ನೂತನ ಸಹಕಾರ ಸಚಿವರಾಗಿ ಅಧಿಕಾರ ವಹಿಸಿಕೊಂಡಿರುವ ಶ್ರೀ ಬಿ.ಜೆ.ಪುಟ್ಟಸ್ವಾಮಿಯವರು ಮೂಲತಹ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಬೆಕ್ಕರಳೆ ಗ್ರಾಮದವರು. ತಂದೆ ಶ್ರೀ ಜವರಶೆಟ್ಟಿಯವರು. ಕೃಷಿಕುಟುಂಬ. ದಿನಾಂಕ 12-4-1939 ರಲ್ಲಿ ಜನನ.

ಡಿಪ್ಲೋಮಾ ಹಾಗೂ ಎ.ಎಮ್.ಐ.ಇ ಇಂಜಿನೀಯರಿಂಗ ಶಿಕ್ಷಣ. ಜೀವನದುದ್ದಕ್ಕೂ ಸಾಮಾಜಿಕ ಅಭಿವೃದ್ಧಿಯ ಕಳಕಳಿಯನ್ನು ಹೊಂದಿರುವ ಶ್ರೀಯುತರು ಸಮಾಜದ ಶೋಷಿತ ವರ್ಗದ ಅಭಿವೃದ್ಧಿಗಾಗಿ ಪ್ರಯತ್ನಿಸುತ್ತಿರುವವರು.

ಕರ್ನಾಟಕ ವಿಧಾನ ಪರಿಷತ್ತಿಗೆ 1982 ರಿಂದ 1988 ವರೆಗೆ ಸೇವೆ ಸಲ್ಲಿಸಿದ್ದಾರೆ, 2012 ಜುಲೈನಲ್ಲಿ ಮತ್ತೆ ವಿಧಾನ ಪರಿಷತ ಸದಸ್ಯರಾಗಿ ಆಯ್ಕೆಯಾಗಿ ಪ್ರಸ್ತುತ ಸಹಕಾರ ಸಚಿವರಾಗಿ ನೇಮಕಗೊಂಡಿದ್ದಾರೆ. ಮಾಜಿಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರ ಆಡಳಿತ ವೈಖರಿ ಹಾಗೂ ವ್ಯಕ್ತಿತ್ವವನ್ನು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಶ್ರೀಯುತರು ವಿಧಾನ ಪರಿಷತ್ತಿನ ಅನೇಕ ಸಮೀತಿಗಳಲ್ಲಿ ಸದಸ್ಯರಾಗಿ ಸಕ್ರೀಯವಾಗಿ ಕಳಂಕರಹಿತರಾಗಿ 40 ವರ್ಷಗಳ ಕಾರ್ಯನಿರ್ವಹಿಸಿದ ಅನುಭವಿಗಳಾಗಿದ್ದಾರೆ.

ಶ್ರೀಯುತರು ಸಹಕಾರ ಕ್ಷೇತ್ರದ ಮೂಲಕ ಸಮಾಜದ ಅತ್ಯಂತ ಕನಿಷ್ಠ ವ್ಯಕ್ತಿಗೂ ಸೇವೆ ಸಲ್ಲಿಸಲು ಅವಕಾಶವಿದೆ ಎಂದು ನಂಬಿರುವ ಶ್ರೀಯುತರು ಸಹಕಾರ ಕ್ಷೇತ್ರದ ಇದುವರೆಗಿನ ಸಾಧನೆ ಮೆಚ್ಚುವಂತಹದ್ದಾಗಿದೆಯಾದರೂ ಸಾಧಿಸಬೇಕಾದುದು ಸಾಕಷ್ಟಿದೆ. ಸಹಕಾರ ತತ್ವಗಳ ಬಗ್ಗೆ ಅಪಾರ ನಂಬಿಕೆಯಿರುವ ಶ್ರೀಯುತರು ಸರಕಾರ ರೈತರ ಹಾಗೂ ಸಹಕಾರ ಕ್ಷೇತ್ರ ಬಡವರ ದೀನ ದಲಿತರ ಅಭಿವೃದ್ಧಿಗಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಲಿದೆ. ಮುಂಬರುವ ದಿನಗಳಲ್ಲಿ ಈ ಕ್ಷೇತ್ರವನ್ನು ಬಲಪಡಿಸಲು ಕ್ರೀಯಾಯೋಜನೆಗಳನ್ನು ಸಿದ್ಧಪಡಿಸಲು ಕ್ರಮವಿಡಲಾಗುವುದು ಎಂದು ಅಭಿಪ್ರಾಯ ಹೊಂದಿದ್ದಾರೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಬಗ್ಗೆ ತೃಪ್ತಿಯನ್ನು ಹೊಂದಿರುವ ಶ್ರೀಯುತರು ಸೌಹಾರ್ದ ಸಹಕಾರಿ ಕಾಯ್ದೆಗೆ ಕೆಲವು ತಿದ್ದುಪಡಿಗಳ ಅವಶ್ಯಕತೆಯಿದೆ. ಸಧ್ಯದಲ್ಲಿಯೆ ತಿದ್ದುಪಡಿ ಜಾರಿಮಾಡಲು ಕ್ರಮವಿಡಲಾಗುವುದೆಂದು ಅಭಿಪ್ರಾಯದವರಾಗಿದ್ದಾರೆ.

ಶ್ರೀಯುತರಿಗೆ ಸೌಹಾರ್ದ ಸಹಕಾರಿಗಳ ಪರವಾಗಿ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಂಗಳೂರು ಇದರ ಆಡಳಿತ ಮಂಡಲಿಯ ಪರವಾಗಿ ಅಭಿನಂದನೆಗಳು.

## ಸೌಹಾರ್ದ ಸಹಕಾರಿಗಳ ಕಾರ್ಯ ನಿರ್ವಹಣೆ ತೃಪ್ತಿಕರ ಸಹಕಾರ ಸಚಿವ – ಶ್ರೀ ಬಿ.ಜೆ. ಪುಟ್ಟಸ್ವಾಮಿ



ನೂತನ ಸಹಕಾರ ಸಚಿವ ಶ್ರೀ ಬಿ.ಜೆ. ಪುಟ್ಟಸ್ವಾಮಿಯವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ಮಾಣ ಹಂತದಲ್ಲಿರುವ ಸಾಕ್ಷ್ಯಚಿತ್ರ 'ಸಂಮೃದ್ಧಿಯತ್ತ ಸೌಹಾರ್ದ ಸಹಕಾರಿ ತತ್ವ' ಕ್ಕೆ ನೀಡಿದ ಸಂದರ್ಶನದಲ್ಲಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 12 ವರ್ಷಗಳ ಅವಧಿಯಲ್ಲಿ 2165 ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ನೋಂದಣಿಯಾಗಿ ಉತ್ತಮ ಪ್ರಗತಿಯನ್ನು ಸಾಧಿಸುತ್ತಿರುವುದು ಶ್ಲಾಘನೀಯ ಈ ಬೆಳೆವಣಿಗೆ ಹೀಗೇಯೇ ಮುಂದುವರಿಯಬೇಕು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಂಪೂರ್ಣ ಸಹಕಾರವನ್ನು ಸರ್ಕಾರ ನೀಡಲು ಸಿದ್ದವಿದೆ. 1959 ಹಾಗೂ 1887ರ ಈ ಎರಡು ಕಾಯ್ದೆಗಳನ್ನು ತುಲನೆ ಮಾಡಿದಾಗ ಸೌಹಾರ್ದ ಸಹಕಾರಿಯ ಬೆಳವಣಿಗೆ ಅತ್ಯಂತ ವೇಗದಲ್ಲಿ ಇದೆ. ಇವು ಇನ್ನೂ ಹೆಚ್ಚು ಗುಣಾತ್ಮಕವಾಗಿಯೂ ಬೆಳೆಯಬೇಕು. ಸಹಕಾರಿ ಸಂಸ್ಥೆಗಳ ಅವಶ್ಯಕತೆ ನಮ್ಮ ದೇಶದ ಬಹುಪಾಲು ಜನರಿಗೆ ಅವಶ್ಯಕತೆ ಇದೆ. ಈ ಅವಶ್ಯಕತೆಯನ್ನು ಪೂರೈಸುವುದು ಎಲ್ಲ ಸಹಕಾರಿಗಳ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಸಹಕಾರ ಕ್ಷೇತ್ರ ಕಾರ್ಯನಿರ್ವಹಿಸುವುದು ಅಗತ್ಯೆಂದು ತಿಳಿಸಿದರು.

# ಬಾಗಲಕೋಟೆಯಲ್ಲಿ ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣಾ ತರಬೇತಿ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಕ್ರೆಡಿಟ ಕೋ-ಆಪರೇಟಿವ್ ಸೊಸೈಟಿಸ್ ಅಸೋಸಿಯೆಷನ್ ಹಾಗೂ ಬಾಗಲಕೋಟೆ ಜಿಲ್ಲಾ ಸಹಕಾರಿ ಯೂನಿಯನ್ ಇವರುಗಳ ಸಹಯೋಗದೊಂದಿಗೆ ದಿನಾಂಕ: 17-07-2012ರಂದು ಮಂಗಳವಾರ ಬಿ.ಡಿ.ಸಿ.ಸಿ ಬ್ಯಾಂಕ ನಿ., ಸಭಾ ಭವನದಲ್ಲಿ ಜಿಲ್ಲೆಯ ಸೌಹಾರ್ದ ಸಹಕಾರಿ ಹಾಗೂ ಪತ್ತಿನ ಸಹಕಾರಿ ಸಂಘಗಳಿಗೆ ಒಂದು ದಿನದ ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ" ಈ ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಬಾಗಲಕೋಟೆ ಜಿಲ್ಲೆಯ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಾಗರ ಚವಜರವರು ನೆರವೇರಿಸಿದರು.

ಇಂದು ಆಧುನಿಕ ಜಗತ್ತು ಸ್ಪರ್ಧೆ ಕಡೆ ಮುಖ ಮಾಡಿ ದಾಪುಗಾಲು ಹಾಕುತ್ತಿರುವುದರಿಂದ ಸಹಕಾರಿ ಕ್ಷೇತ್ರವು ಸ್ಪರ್ಧೆಯನ್ನು ಎದುರಿಸಬೇಕಾಗಿದೆ. ಇಂತಹ ಸ್ಪರ್ಧೆ ಎದುರಿಸಬೇಕಾಗದರೆ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರಿಗೆ ತರಬೇತಿ ಅತ್ಯಾವಶ್ಯಕವಾಗಿದೆ. ಇಂತಹ ತರಬೇತಿ ಮಾರ್ಗದರ್ಶನ ಸಂಯುಕ್ತ ಸಹಕಾರಿ ಸೌಹಾರ್ದ ಸಹಕಾರಿಗಳಿಗೆ ನೀಡುತ್ತಿರುವುದರಿಂದ 450 ಕ್ಕಿಂತ ಅಧಿಕ ಇ-ಸ್ಟಾಂಪಿಂಗ್ ಕೇಂದ್ರಗಳ ಜೊತೆ 2100 ಕ್ಕಿಂತ ಅಧಿಕ ಸೌಹಾರ್ದ ಸಹಕಾರಿಗಳು ಉತ್ತಮ ಸೇವೆ ನೀಡುವುದರ ಮುಖಾಂತರ ಕಾರ್ಯನಿರ್ವಹಿಸುತ್ತಿವೆ.

ಅತಿಥಿಗಳಾಗಿ ಅಗಮಿಸಿದ ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟೆ ಇದರ ಉಪಾಧ್ಯಕ್ಷರಾದ ಶ್ರೀ ಜಿ.ಎನ್ ಪಾಟೀಲ ಮಾತನಾಡುತ್ತ ಇಂದು ಸಹಕಾರ ಕ್ಷೇತ್ರವು ಜನ ಮಾನಸದಲ್ಲಿ ಇರುವುದರಿಂದ ಅವರು ಕಂಡಿರುವ ಕನಸು ಸೌಹಾರ್ದ ಸಹಕಾರಿಗಳಿಂದ ನನಸು ಆಗುತ್ತಿರುವುದು ಸಂತೋಷಕರವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಶ್ರೀ ಎಲ್.ಎಂ.ಪಾಟೀಲ ವಹಿಸಿದರು. ವೇದಿಕೆಯಲ್ಲಿ ಬಿ.ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಂ.ಎಂ. ಹಟ್ಟಿ ಹಾಗೂ ಬೀಳೂರು ಪತ್ತಿನ ಸಹಕಾರಿ ಸಂಘದ ಉಪಾಧ್ಯಕ್ಷರಾದ ಶ್ರೀ ಮುರಗಪ್ಪ ನಾರಾ ಉಪಸ್ಥಿತರಿದ್ದರು.

ಬೆಳಗಾವಿ ವಿಭಾಗೀಯ ರಿಜಿನಲ್ ಮ್ಯಾನೇಜರಾದ ಶ್ರೀ ಜಿ.ಎಸ್.ಟೋಪಣ್ಣವರು ಪ್ರಾಸ್ತವಿಕ ನುಡಿ ಹಾಗೂ ಸ್ವಾಗತ ಮಾಡಿದರೆ, ಅಧಿಕಾರಿ ಸೂರ್ಯಕಾಂತ ರ್‍ಯಾಕಲೆ ವಂದಿಸಿದರು. ಜಿಲ್ಲಾ ಸಹಕಾರಿ ಯೂನಿಯನಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀಮತಿ ಜಯಶ್ರೀ ಹುನಗುಂದ ನಿರೂಪಣೆ ಮಾಡಿದರು.

ತರಬೇತಿ ಕಾರ್ಯಕ್ರಮದ ಬೆಳಗಿನ ಅವಧಿಯಲ್ಲಿ ಸಹಕಾರ ಕ್ಷೇತ್ರ ಬೆಳವಣಿಗೆ, 1997ರ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಹಾಗೂ ಮುಖ್ಯಾಂಶಗಳು, 1959 ರ ಕಾಯ್ದೆ ಹಾಗೂ 1997 ರ ಸೌಹಾರ್ದ ಕಾಯ್ದೆಗಳಿಗೆ ಇವರು ವ್ಯತ್ಯಾಸಗಳು ಈ ವಿಷಯದ ಕುರಿತು ಶ್ರೀ ಎಸ್.ಜಿ. ಜೋಶಿ ನಿವೃತ್ತ ಸಹಾಯಕ ನಿಬಂಧಕರು ಹಾಗೂ ಮಧ್ಯಾಹ್ನದ ಅವಧಿ ಸಹಕಾರಿ ಸಂಸ್ಥೆಗಳಲ್ಲಿ ಗುಣಮಟ್ಟ ನಿರ್ವಹಣೆಯೆಂಬ ವಿಷಯದ ಬಗ್ಗೆ ಶ್ರೀ ಬಿ.ಎ. ಮಹಾದೇವಪ್ಪ ಅಪರ ನಿಬಂಧಕರು ಸಹಕಾರಿ ಸಂಘಗಳ ಇಲಾಖೆ ಇವರು ಉಪನ್ಯಾಸ ನೀಡಿದರು.

ತರಬೇತಿಯಲ್ಲಿ 20 ಸೌಹಾರ್ದ ಸಹಕಾರಿಗಳ 42 ಜನ ಪ್ರತಿನಿಧಿಗಳು ಹಾಗೂ 28 ಸಹಕಾರಿ ಸಂಘಗಳ 38 ಜನ ಪ್ರತಿನಿಧಿಗಳು ಸೇರೆದಂತೆ ಒಟ್ಟು 90 ಕ್ಕಿಂತ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಂಡರು.

## ಸಂಡೂರು ಶ್ರೀ ಶಿವಲೀಲೆ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ ಇ-ಸ್ಟ್ಯಾಂಪಿಂಗ್ ಉದ್ಘಾಟನೆ



ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಶ್ರೀ ಶಿವಲೀಲೆ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಇದರ ಇ-ಸ್ಟ್ಯಾಂಪಿಂಗ್ ಉದ್ಘಾಟನಾ ಕಾರ್ಯಕ್ರಮವು ದಿನಾಂಕ 27.07.2012ರಂದು ಶುಕ್ರವಾರ ನಡೆಯಿತು. ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ್ಯರು ಶ್ರೀ ವಿಶ್ವನಾಥ ಚ. ಹಿರೇಮಠರವರು ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಬಳ್ಳಾರಿ ಜಿಲ್ಲಾ ನಿರ್ದೇಶಕರಾದ ಶ್ರೀ ಎಲ್.ಎಸ್. ಆನಂದ್‌ರವರು ಉಪಸ್ಥಿತರಿದ್ದರು. ಸಂಡೂರಿನ ಮಹಿಳಾ ಪ್ರಗತಿ ಅಧ್ಯಕ್ಷೆ ಶ್ರೀಮತಿ ಸುಮಂಗಳಮ್ಮ ಇ-ಸ್ಟ್ಯಾಂಪಿಂಗ್ ಕಾರ್ಯಾಚರಣೆಯನ್ನು ಉದ್ಘಾಟಿಸಿದರು.

## ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ




**ಶ್ರೀಕಾಂತ ಬರುವೆ**
ಕಾನೂನು ವಿಭಾಗ ಸಂಯುಕ್ತ ಸಹಕಾರಿ

**ಶಂಕರ್ ಐ ಹೆಗಡೆ, ಸಹಕಾರಿ ಸಲಹೆಗಾರರು ತುಮಕೂರು**

**ಪ್ರಶ್ನೆ 1 : ಸೌಹಾರ್ದ ಸಹಕಾರಿಯಲ್ಲಿ ನಾಮಮಾತ್ರ ಸದಸ್ಯರುಗಳು ಠೇವಣಿ ರೂಪದಲ್ಲಿ ಹಣ ತೊಡಗಿಸಬಹುದೇ? ಸಹಕಾರಿಯ ಉಪವಿಧಿಯ ರೀತ್ಯ ವಿವಿಧ ಸಾಲಗಳನ್ನು ಪಡೆಯಬಹುದೇ?**

ಉತ್ತರ: ಸೌಹಾರ್ದ ಸಹಕಾರಿ ಅಧಿನಿಯಮ,1997ರ ಕಲಂ 21ಎ ರನ್ವಯ ಯಾವದೇ ವ್ಯಕ್ತಿಯನ್ನು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ರಚಿತವಾದ ಯಾವುದೇ ಫರ್ಮು, ಕಂಪನಿ, ಸಹಕಾರ ಸಂಘ, ಸಹಕಾರಿ ಅಥವಾ ನಿಕಾಯ ಅಥವಾ ನಿಗಮವನ್ನು ಉಪವಿಧಿಯಲ್ಲಿ ನಮೂದಿಸಲಾದ ನಿರ್ದಿಷ್ಟ ಉದ್ದೇಶಕ್ಕಾಗಿ ಮತ್ತು ನಿರ್ದಿಷ್ಟ ಅವಧಿಗಾಗಿ ನಾಮ ಮಾತ್ರ ಸದಸ್ಯನೆಂದು ಸೇರಿಸಿಕೊಳ್ಳಲು ಅವಕಾಶವಿದೆ. ಒಂದು ವೇಳೆ ಸಹಕಾರಿಯ ಉಪವಿಧಿಯಲ್ಲಿ ನಾಮಮಾತ್ರ ಸದಸ್ಯರಿಂದ ಠೇವಣಿ ಸ್ವೀಕರಿಸಲು ಮತ್ತು ಸಾಲವನ್ನು ನೀಡಲು ಪ್ರಾವಧಾನ ಮಾಡಿಕೊಳ್ಳಲಾಗಿದ್ದರೆ ನಾಮಮಾತ್ರ ಸದಸ್ಯರಿಂದ ಠೇವಣಿ ಸ್ವೀಕರಿಸಬಹುದು ಮತ್ತು ಸಾಲವನ್ನು ನೀಡಬಹುದು.

**ಪ್ರಶ್ನೆ 2: ಸಹಕಾರ ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆದು ನಿರ್ದೇಶಕರಾಗಿ ಚುನಾಯಿತರಾದವರು ಸೌಹಾರ್ದ ಸಹಕಾರಿಗಳಲ್ಲಿಯೂ ಸದಸ್ಯತ್ವ ಪಡೆದು ನಿರ್ದೇಶಕ ಹುದ್ದೆಗೆ ಸ್ಪರ್ಧಿಸಬಹುದೇ?**

ಉತ್ತರ: ಕಾಯ್ದೆ ಕಲಂ 20(1)ರನ್ವಯ ಯಾರೇ ವ್ಯಕ್ತಿಯನ್ನು, ಎಂದರೆ–

(ಎ) ಅವನಿಗೆ ಸಹಕಾರಿ ಸೇವೆಯು ಅಗತ್ಯ ವಾಗಿರುವಲ್ಲಿ, ಅವನು ಸದಸ್ಯರ ಹೊಣೆಗಾರಿಕೆಯನ್ನು ಅಂಗೀಕರಿಸಿದಲ್ಲಿ ಮತ್ತು ಕರಾರು ಅಧಿ ನಿಯಮ 1872ರ (1872ರ ಕೇಂದ್ರ ಅಧಿನಿಯಮ IX) ಅಡಿಯಲ್ಲಿ ಕರಾರು ಮಾಡಿಕೊಳ್ಳಲು ಸಕ್ಷಮನಾಗಿದಿದ್ದಲ್ಲಿ;

(ಬಿ) ಅವನು ಯಾವುದೇ ವ್ಯವಹಾರವನ್ನು ನಡೆಸುತ್ತಿದ್ದು, ಅಂಥ ವ್ಯವಹಾರವು ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಿದ ವ್ಯವಹಾರಗಳಿಗೆ ವಿರುದ್ಧವಾಗಿರದಿದ್ದಲ್ಲಿ ಅಥವಾ ಸ್ಪರ್ಧಾತ್ಮಕ ವಾಗಿರದಿದ್ದಲ್ಲಿ

(ಸಿ) ಅವನು ಸಹಕಾರಿಯ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿರುವ ಅಂಥ ಇತರ ಷರತ್ತುಗಳನ್ನು ಪೂರೈಸಲು ಒಪ್ಪಿದಲ್ಲಿ ಅಂಥಹ ಸದಸ್ಯನು ಸೌಹಾರ್ದ ಸಹಕಾರಿಯ ಸದಸ್ಯತ್ವ ಪಡೆಯಬಹುದಾಗಿರುತ್ತದೆ.

ಆದರೆ ಕಾಯ್ದೆ ಕಲಂ 20(1)(ಬಿ)ರನ್ವಯ ಸದಸ್ಯನಾಗ ಬಯಸುವ ವ್ಯಕ್ತಿಯು ಯಾವುದೇ ವ್ಯವಹಾರವನ್ನು ನಡೆಸುತ್ತಿದ್ದು, ಅಂಥ ವ್ಯವಹಾರವು ಸಹಕಾರಿಯ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ವ್ಯವಹಾರಗಳಿಗೆ ವಿರುದ್ಧವಾಗಿದ್ದಲ್ಲಿ ಅಥವಾ ಸ್ಪರ್ಧಾತ್ಮಕವಾಗಿದ್ದಲ್ಲಿ ಅಂಥಹ ವ್ಯಕ್ತಿಯನ್ನು ಸದಸ್ಯನನ್ನಾಗಿ ಸ್ವೀಕರಿಸತಕ್ಕದ್ದಲ್ಲ. ಅಲ್ಲದೆ ಯಾವುದೇ ವ್ಯಕ್ತಿಯು ಈಗಾಗಲೇ ಇನ್ನೊಂದು ಸಹಕಾರಿ/ಸಂಘದ ಸದಸ್ಯನಾಗಿದ್ದು ಅಂಥಹ ಸಹಕಾರಿಯ ವ್ಯವಹಾರವು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ವ್ಯವಹಾರಗಳಿಗೆ ವಿರುದ್ಧವಾಗಿದ್ದಲ್ಲಿ ಅಥವಾ ಸ್ಪರ್ಧಾತ್ಮಕವಾಗಿದ್ದಲ್ಲಿ ಅಂಥಹ ಸಹಕಾರಿಯ/ಸಂಘದ ಸದಸ್ಯನನ್ನೂ ಸಹ ಸದಸ್ಯನನ್ನಾಗಿ ಸ್ವೀಕರಿಸತಕ್ಕದ್ದಲ್ಲ.

ಯಾವುದೇ ವ್ಯಕ್ತಿಯನ್ನು ಸದಸ್ಯನನ್ನಾಗಿ ಸಹಕಾರಿಯು ಸ್ವೀಕರಿಸಿದಲ್ಲಿ ಕಾಯ್ದೆ ಕಲಂ 25(1)(ಎ)(ಬಿ)(ಸಿ)(ಡಿ)(ಎಫ್)ಗಳಲ್ಲಿ ತಿಳಿಸಿರುವ ಯಾವುದೇ ಅನರ್ಹತೆಯನ್ನು ಅಂಥಹ ಸದಸ್ಯನು ಹೊಂದಿರದಿದ್ದಲ್ಲಿ ಅಂಥಹ ಸದಸ್ಯನು ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಬಹುದಾಗಿರುತ್ತದೆ.

**ಪ್ರಶ್ನೆ 3: ಸೌಹಾರ್ದ ಸಹಕಾರಿ ಅಧಿನಿಯಮದ ಅಡಿಯಲ್ಲಿ ನೋಂದಣಿಗೊಂಡ ಸಂಸ್ಥೆಗಳು ಸಹಕಾರ ಶಿಕ್ಷಣ ನಿಧಿಯನ್ನು ನೇರವಾಗಿ ಸೌಹಾರ್ದ ಸಂಯುಕ್ತ ಸಹಕಾರಿಗೆ ಪಾವತಿಸಬೇಕೇ? ಇಲ್ಲವೇ ಶೇ.2ರಷ್ಟನ್ನು ನೇರವಾಗಿ ಸಹಕಾರ ಮಹಾಮಂಡಳಕ್ಕೆ ಪಾವತಿಸಬಹುದೇ?**

ಉತ್ತರ: ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10(2)(ಥಥು)(ಬಿ)ರಲ್ಲಿ ಶಿಕ್ಷಣ ನಿಧಿಯನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಇದಕ್ಕೆ ಪಾವತಿಸುವ ಕುರಿತು ಹೇಳಲಾಗಿರುತ್ತದೆ. ಆದರೆ ನೇರವಾಗಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,ಕ್ಕೆ ಪಾವತಿಸುವ ಕುರಿತು ಹೇಳಿರುವುದಿಲ್ಲ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ವು ಒಂದು ಶಾಸನಬದ್ಧ ಸಂಸ್ಥೆಯಾಗಿದ್ದು ತನ್ನ ಸದಸ್ಯ ಸಹಕಾರಿಗಳು ನೀಡುವ ಶಿಕ್ಷಣ ನಿಧಿಯು ಸೌಹಾರ್ದ ಸಹಕಾರಿಗಳ ಶಿಕ್ಷಣಕ್ಕೆ ಸದುಪಯೋಗವಾಗಿರುವ ಕುರಿತು ಖಚಿತತೆಯನ್ನು ಹೊಂದಿರಬೇಕಾಗುತ್ತದೆ. ಶಿಕ್ಷಣ ನಿಧಿ ಸದುಪಯೋಗದ ಕುರಿತಾಗಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ. ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವುಗಳು ಪರಸ್ಪರ ತಿಳುವಳಿಕೆ ಒಪ್ಪಂದವನ್ನು ಮಾಡಿಕೊಂಡಿರುತ್ತವೆ.

ಸಂಯುಕ್ತ ಸಹಕಾರಿಯು ಕಾಯ್ದೆ ಕಲಂ 53(7)(ಎ)ರಡಿ ದಿನಾಂಕ 8 ನವಂಬರ್ 2006ರಂದು ಸುತ್ತೋಲೆ ಸಂಖ್ಯೆ:ಸಂಸ/ಆ–6/2006ನ್ನು ಎಲ್ಲಾ ಸೌಹಾರ್ದ ಸಹಕಾರಿಗಳಿಗೂ ನೀಡಿದ್ದು ಅದರನ್ವಯ ಶೇ.2ರಷ್ಟು ಶಿಕ್ಷಣ ನಿಧಿಯನ್ನು ಸಂಯುಕ್ತ ಸಹಕಾರಿಗೆ ಪಾವತಿಸತಕ್ಕದ್ದು.




## ಸ್ವಾಭಿಮಾನಿ ಸಹಕಾರಿಯ ಬಗ್ಗೆ ಅನಿಸಿಕೆ

ಮಾನ್ಯರೇ, ನಿರ್ದೇಶಕರ ತರಬೇತಿ ಶಿಬಿರ, ಮಹಿಳಾ ಸಹಕಾರಿಗಳ ಸಮಾವೇಶ ಮತ್ತು ವ್ಯಕ್ತಿತ್ವ ವಿಕಸನ ಮುಂತಾದ ಕಾರ್ಯಕ್ರಮಗಳನ್ನೇರ್ಪಡಿಸಿ, ಸಹಕಾರ ತತ್ವದ ಬಗ್ಗೆ ಸದಾ ಜಾಗೃತಿ ಮೂಡಿಸುವುದರೊಂದಿಗೆ, ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಕಾರ್ಯ ವೈಖರಿಯ ಬಗ್ಗೆ ಮುತುವರ್ಜಿ ಹಾಗೂ ನಿಗಾ ವಹಿಸುತ್ತಿರುವ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಶ್ಲಾಘನೀಯ.

ಸಹಕಾರಿಗಳ ತರಬೇತಿ ಸಂದರ್ಭದಲ್ಲಿ ವಿತರಿಸಿದ "ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ" ಎಂಬ ಮಾಹಿತಿಯ ಪುಸ್ತಕವು ಅತ್ಯುತ್ತಮ ವಿಚಾರಗಳನ್ನು ಸಂಕ್ಷಿಪ್ತವಾಗಿ ತಿಳಿಸುವಲ್ಲಿ ಯಶಸ್ವಿಯಾಗಿದೆ.

ಸ್ವಾಭಿಮಾನಿ ಸಹಕಾರಿಯಲ್ಲಿ ಆರ್.ಬಿ.ಐ. ನ 6 ತಿಂಗಳ ಆರ್ಥಿಕ ಸಮೀಕ್ಷೆ ಮತ್ತು ಕ್ರಮಗಳ ವಿವರ ಇನ್ನೂ ವಿವರವಾಗಿ ಮೂಡಿಬರಲಿ.

**– ಬಾಲಾಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,**

ಸಂಯುಕ್ತ ಸಹಕಾರಿಯ 'ಸ್ವಾಭಿಮಾನಿ ಸಹಕಾರಿ' ಮಾಸ ಪತ್ರಿಕೆಯು ಸರ್ವಾಂಗ ಸುಂದರವಾಗಿ ಪ್ರಕಟಗೊಳ್ಳುತ್ತಿರುವುದರ ಜೊತೆಗೆ ಸಹಕಾರಿ ಕ್ಷೇತ್ರದ ಜನತೆಗೆ ಅತ್ಯುತ್ತಮ ಮಾರ್ಗದರ್ಶಿಯಾಗಿ ಹೊರ ಹೊಮ್ಮುತ್ತಿದೆ. ಸಂಬಂಧಿಸಿದ ವರೆಲ್ಲರಿಗೂ ಅಭಿನಂದನೆಗಳು.

**– ಶ್ರೀ ಭಾರ್ಗವ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕಾರ್ಕಳ, ಉಡುಪಿ.**

...14ನೇ ಪುಟದಿಂದ

12) **ಏರಿಳಿತಗಳನ್ನು ನಿಭಾಯಿಸುವ ಗುಣ** (**Moderator skills**): ವಿವಿಧ ರೀತಿಯ ಕೆಲಸಗಳನ್ನು ಮಾಡುವಾಗ ಏರು–ಇಳಿತ ಆಗುವುದು ಸಹಜ–ಸಾಮಾನ್ಯ ಸತ್ಯದ ಸಂಗತಿ. ಇವೆಲ್ಲಗಳನ್ನು ಮೀರಿ ತಂಡಗಾರರ ಭಾವನೆಗಳನ್ನು (**emotions**) ನಿಭಾಯಿಸಲು ಇರಬೇಕಾದ ಶಕ್ತಿ ಮುಖ್ಯ–ಅತಿಮುಖ್ಯ.

13) **ಹೊಗಳುವುದು – ತೆಗಳುವುದು** (**Praising & condemning team measures**) : ಒಳ್ಳೆ ಕೆಲಸಮಾಡಿದ ತಂಡದವರನ್ನು ತಕ್ಕದಾಗಿ ಹೊಗಳುವುದರಿಂದ ಅವರು ಹುರುಪಿನಿಂದ ಕೆಲಸ ಮಾಡಲು ಪ್ರೇರೇಪಿಸಿದಂತಾಗುತ್ತದೆ. ಅದೇ ರೀತಿ ತಪ್ಪು ಮಾಡಿದವರನ್ನು ತಿದ್ದಿ – ಬುದ್ಧಿಹೇಳಿ ಅವರನ್ನು ತಮ್ಮೊಡನೆ ತೆಗೆದುಕೊಂಡು ಅವಶ್ಯಕತೆಯೇ ವಿನಃ, ಅವರನ್ನು ತೆಗಳುವುದಲ್ಲ. ಎಲ್ಲರೂ ತಪ್ಪುಗಳನ್ನು ಗಮನಿಸಿ ತಿದ್ದಿಕೊಳ್ಳಬೇಕು.

14) **ಪ್ರೇರೆಪಿತ ಶಕ್ತಿ** (**Motivation skills**) : ಯಾವಾಗಲೂ ತನ್ನನು, ತನ್ನವರನ್ನು, ಪರರನ್ನು ಸತತವಾಗಿ ಪ್ರಯತ್ನಮಾಡಲು ಪ್ರೇರೇಪಿಸಿ – ಶಕ್ತಿತುಂಬುವ ಕೇಂದ್ರಬಿಂದುವಾಗಿರಬೇಕು. ನಾಯಕನಾದವನು ಉತ್ಸಾಹದ ಚಿಲುಮೆಯಾಗಿರಬೇಕು.

15) **ಆತ್ಮವಿಶ್ವಾಸ** (**Self-confidence**) : ತನ್ನ ಬಗ್ಗೆ, ತನ್ನ ತಂಡದವರ ಸಾಮಾರ್ಥ್ಯದ ಬಗ್ಗೆ ಬಲವಾದ ನಂಬಿಕೆ ಮತ್ತು ಸಂಪೂರ್ಣ ಆತ್ಮವಿಶ್ವಾಸವಿದ್ದರೆ, ಸಾಧನೆ ಮಾಡುವುದು ಅತಿ ಸುಲಭ. ನಿಂತ ಜಾಗದಿಂದ ಮೇಲೆರುವ ಹೆಲಿಕಾಪ್ಟರಿನಂತೆ, ವ್ಯಕ್ತಿಯ/ ಸಂಸ್ಥೆಯ ಆತ್ಮವಿಶ್ವಾಸ ಸದಾಕಾಲ ಮೇಲೆ ಏರುತ್ತಿರಬೇಕು.

16) **ಸಂದಿಗ್ಧ ನಿರ್ವಹಣೆಯಕಲೆ** (**Conflict management skills**): ಸಫಲತೆಯ ಪ್ರಯೋಗ, ಹಂತದಲ್ಲೂ ಸಂದಿಗ್ಧ ಪರಿಸ್ಥಿತಿಗಳು ಬರುವುದು ಸರ್ವೇಸಾಮಾನ್ಯ. ಸಂಧಿಗ್ಧ ಪರಿಸ್ಥಿತಿಗಳನ್ನು ನಿರ್ವಹಿಸುವ ಕಲೆಯನ್ನು ಮೈಗೂಡಿಸಿಕೊಂಡ ವ್ಯಕ್ತಿ–ಶಕ್ತಿಯಾಗಿ ಬೆಳೆಯುತ್ತಾನೆ.

17) ತೊಂದರೆಗಳ ಹಂದರದಿಂದ ಹೊರಬೀಳುವ ಚಾಕಚಕ್ಯತೆ (**Crisis management skills**) : ಎಷ್ಟೋ ಸಾರಿ ಕ್ಲಿಷ್ಟಕರವಾದ – ಕಷ್ಟದಲ್ಲಿ ಬಿದ್ದು ಒದ್ದಾಡುವ ಪರಿಸ್ಥಿತಿಗಳು ಎದುರಾಗುತ್ತವೆ. ಆ ಪರಿಸ್ಥಿತಿಗೆ ಅನುಗುಣವಾಗಿ ಕೌಶಲ್ಯಪೂರ್ವದಿಂದ ಹೊರಬರುವುದು ಒಂದು ವಿಶೇಷವಾದ ಚಾಕಚಕ್ಯತೆ ಬಹುಮುಖ್ಯವಾಗುತ್ತದೆ.

18) **ಸಮಯ ಪ್ರಜ್ಞತೆಯ ಗುಣ** (**Time management skills**): ಸಮಯ ಹಣಕ್ಕಿಂತಲೂ ಅತ್ಯಮೂಲ್ಯವೆಂಬುದು ಎಲ್ಲರಿಗೂ ತಿಳಿದ ಸತ್ಯ. ರಾಜನಿಂದ – ಭಿಕ್ಷುಕನವರೆಗೂ, ಚೇರಮನ್‌ನಿಂದ ಚಪರಾಸಿವರೆಗೂ ಸಮಾನವಾಗಿರುವುದು 'ಸಮಯ' ಮಾತ್ರ. ಈ ಸಮಯವನ್ನು ಸಮರ್ಪಕವಾಗಿ – ಯೋಚಿಸಿ– ಯೋಜನೆ ಮೂಲಕ ಸಮಯೋಚಿತವಾಗಿ ಉಪಯೋಗಿಸಬೇಕಾದದು ಅತಿಮುಖ್ಯ.

(ಮುಂದಿನ ಸಂಚಿಕೆಗೆ...)

## ಸಹಕಾರಿ ನಿಬಂಧಕರ ವಾರ್ತೆ

### ನೋಂದಣಿ ಪೂರ್ವ ಅನುಮತಿ ಹಿಂಪಡೆದಿರುವ ಬಗ್ಗೆ

- ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಪತ್ರ ಸಂಖ್ಯೆ ಆರ್‌ಎಸ್‌ಆರ್ ಸೌಹಾರ್ದ 212 –2011–12 ದಿನಾಂಕ 19/7/2012ರ ಪ್ರಕಾರ ಉದ್ದೇಶಿತ ರಾಸನ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿಮಿಟೆಡ್ ಬೆಂಗಳೂರು ಇದರ ನೋಂದಣಿ ಪೂರ್ವ ಷೇರು ಸಂಗ್ರಹಣೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆಯಲಾಗಿದೆ ಎಂದು ತಿಳಿಸಲಾಗಿದೆ.
- ಸಹಕಾರ ಸಂಘ ಕಛೇರಿಯ ಪತ್ರ ಸಂಖ್ಯೆ ಆರ್‌ಎಸ್‌ಆರ್ ಸೌಹಾರ್ದ 159/2011–12 ದಿನಾಂಕ 10/7/2012 ರ ಪ್ರಕಾರ ಉದ್ದೇಶಿತ ಶುಭ 7 ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್ ಬೆಂಗಳೂರು ಇದರ ನೋಂದಣಿ ಪೂರ್ವ ಷೇರು ಸಂಗ್ರಹಣೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆಯಲಾಗಿದೆ ಎಂದು ತಿಳಿಸಲಾಗಿದೆ.

### ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಗೆ

## ರೂ. 58.08 ಲಕ್ಷ ನಿವ್ವಳ ಲಾಭ

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯು ದಿನಾಂಕ : 29–07–2012ರಂದು ನಡೆದ 2011–12ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಸಹಕಾರಿಯ ದುಡಿಯುವ ಬಂಡವಾಳ 43.75 ಕೋಟಿ ಹಾಗೂ 58.08 ಲಕ್ಷ ನಿವ್ವಳ ಲಾಭ ಗಳಿಸಿದೆ.

### ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲ್ ಕಿವಿಮಾತು

# ವ್ಯವಹಾರದ ಜತೆಗೆ ಜನಸೇವೆ ಮುಖ್ಯ



**ಬೆಂಗಳೂರು :** ಸಹಕಾರಿ ಸಂಸ್ಥೆಗಳಿಗೆ ವ್ಯವಹಾರದ ಜೊತೆಗೆ ಜನಸೇವೆಯೂ ಪ್ರಾಮುಖ್ಯವಾಗಬೇಕು ಎಂದು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಕಿವಿಮಾತು ಹೇಳಿದ್ದಾರೆ.

ರಾಜಾಜಿನಗರದಲ್ಲಿ ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಸೋಸೈಟಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಹಕಾರಿ ಸಂಸ್ಥೆ ಅಥವಾ ಇನ್ನಾವುದೇ ಸಂಘ-ಸಂಸ್ಥೆಗಳಿರುಲ್ಲಿ ಜನರ ವಿಶ್ವಾಸಗಳಿಸುವುದು ಮುಖ್ಯ.

ಗಳಿಸಿದ ವಿಶ್ವಾಸವನ್ನು ಉಳಿಸಿಕೊಂಡು ಹೋಗುವುದು ಕೂಡ ಪ್ರಾಧಾನ್ಯವಾಗಬೇಕು. ಜನರ ವಿಶ್ವಾಸ ಅಭ್ಯುದಯ ಬಯಸಿದರೆ ಯಾವುದೇ ಸಹಕಾರಿ ಸಂಸ್ಥೆಗಳಿರಲಿ ಅಭಿವೃದ್ಧಿಯಿಂದ ಹಿಂದೆ ಸರಿಯುವ ಮಾತೇ ಸುಳಿಯುವುದಿಲ್ಲ ಎಂದು ಹೇಳಿದರು.

ಸಹಕಾರಿ ಸಂಸ್ಥೆಗಳು ಕೇವಲ ವ್ಯವಹಾರವನ್ನಾಗಿ ಮಾಡಬಾರದು, ಸಮಾಜ ಸೇವೆಯೆಂದು ಭಾವಿಸಬೇಕಿದೆ. ಸೇವಾ ಮನೋಭಾವನೆಯಿಂದ ಜನರ ಸಮಸ್ಯೆಗಳಿಗೆ ಸ್ಪಂದಿಸಿದರೆ ಜೀವನವಿಡಿ ಸ್ಮರಿಸುತ್ತಾರೆ. ಯಾವುದೇ ಕ್ಷೇತ್ರ ಅಥವಾ ಸೇವೆ ಇರಲಿ ನಮ್ಮಜನ,ನಮ್ಮದೇಶವೆಂದು ಗೌರವಿಸುವ ಮನೋಭಾವನೆ ಎಲ್ಲರಲ್ಲೂ ಬರಬೇಕು. ದೇಶಧ ಬಗ್ಗೆ ನಕಾರಾತ್ಮಕ ಭಾವನೆಗಳಿಗಿಂತ ಸಕಾರಾತ್ಮಕ ನಿಲುವುಗಳು ಪ್ರತಿಯೊಬ್ಬರಲ್ಲೂ ಮೂಡಬೇಕು. ದೇಶ ತಮಗೇನು ಕೊಟ್ಟಿದೆ ಎನ್ನುವುದಕ್ಕಿಂತ ತಾವೇನು ಕೊಟ್ಟಿದ್ದೇವೆ ಎಂಬ ಆತ್ಮಾವಲೋಕನ ನಡೆಯಬೇಕು ಎಂದರು.

**ಶಾಶ್ವತವಲ್ಲ :** ಕೆಪಿಎಸ್‌ಸಿ ಅಧ್ಯಕ್ಷ ಗೋನಾಳ್ ಭೀಮಪ್ಪ ಮಾತನಾಡಿ, ಮನಸಿನಂತೆ ಸಂಪತ್ತು ಕೂಡ ಚಂಚಲ. ಹಣ ಅಂತಸ್ತು, ಅಧಿಕಾರ ಈ ಮೂರು ಮನುಷ್ಯನಿಗೆ ಶಾಶ್ವತವಲ್ಲ ಇವುಗಳಿಗೆ ದುರಾಸೆಪಟ್ಟರೆ ಯಮ ಕೂಡ ಕ್ಷಮಿಸಲಾರನು. ಅದನ್ನು ಅರಿತು. ಪ್ರತಿಯೊಬ್ಬರು ನಂಬಿಕೆ,ವಿಶ್ವಾಸಕ್ಕೆ ಅರ್ಹರಾಗುವಂತಹ ಕೆಲಸ ಕಾರ್ಯಗಳನ್ನು ಮಾಡಬೇಕಿದೆ. ಎಂದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷ ಎಸ್.ಆರ್. ಸತೀಶ್‌ಚಂದ್ರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಬಿಬಿಎಂಪಿ ಸದಸ್ಯ ಮಂಜುನಾಥ,ಅಪೆಕ್ಸ್ ಬ್ಯಾಂಕ್ ನಿವೃತ್ತ ಮುಖ್ಯ ಪ್ರಧಾನ ವ್ಯವಸ್ಥಾಪಕ ಕೆ.ವಿ. ರೆಡ್ಡಿ ಸಹಕಾರ ಸಂಘಗಳ ಅಪರ ನಿಬಂಧಕ ಸಿ.ಎಸ್. ವೀರೇಶ್, ನವಕಲ್ಯಾಣ ಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ- ಆಪರೇಟಿವ್ ಸೊಸೈಟಿ ಅಧ್ಯಕ್ಷ ವಿ.ಬಿ.ಪಾಟೀಲ್ ಇನ್ನಿತರರು ಉಪಸ್ಥಿತರಿದ್ದರು.

# ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ

2011-12ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹಂಜಿ ಶಿವಸ್ವಾಮಿಯವರ ಘನ ಅಧ್ಯಕ್ಷತೆಯಲ್ಲಿ ನಡೆಯಿತು.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಡಿ. ಆದಿರಾಜಯ್ಯನವರು ಸ್ವಾಗತಿಸಿದರು. ಬ್ಯಾಂಕಿನ ನಿರ್ದೇಶಕರಾದ ಬಿ.ವಿ. ಕುಶಕುಮಾರ್ ಎಲ್ಲರಿಗೂ ವಂದಿಸಿದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಎಸ್. ಪ್ರಹ್ಲಾದರಾವ್ ಮತ್ತು ವ್ಯವಸ್ಥಾಪಕರಾದ ಎನ್. ಮಂಜುನಾಥ್‌ರವರು ಕಾರ್ಯಕ್ರಮದ ನಿರೂಪಣೆಯನ್ನು ನಡೆಸಿಕೊಟ್ಟರು.



## ಮೈಕ್ರೋ ಫೈನಾನ್ಸ್ ಸಾಲ ಯೋಜನೆ

# ಹಾವೇರಿ ಜಿಲ್ಲೆಯ ಆದಿಶಕ್ತಿ ಸೌಹಾರ್ದ ಸಹಕಾರಿಯ ಮೆಚ್ಚುಗೆಯ ಸಾಧನೆ

ಹಾವೇರಿ ಜಿಲ್ಲೆಯಲ್ಲಿಯ ಆಧಿಶಕ್ತಿ ಸೌಹಾರ್ದ ಸಹಕಾರಿ ನಿ., ಹಾನಗಲ್ಲ ತಾ॥ ಹಾನಗಲ್ಲ ಜಿ॥ ಹಾವೇರಿ ಈ ಸಂಸ್ಥೆಯು ಸಮಾಜದಲ್ಲಿ ಆರ್ಥಿಕವಾಗಿ ಬಡತನ ರೇಖೆಯ ಕೆಳಗೆ ಇರುವ ಹಾಗೂ ಅಬಲರಾದ ಜನರಿಗೆ, ಬಡಬಗ್ಗರಿಗೆ ತಮ್ಮ ಸಂಸ್ಥೆಯಲ್ಲಿ ಮೈಕ್ರೋ ಫೈನನ್ಸ್ ಸಾಲ ಯೋಜನೆಯನ್ನು ಪ್ರಾರಂಭಿಸಿ ಇಲ್ಲಿಯವರೆಗೆ 393 ಫಲಾನುಭವಿಗಳಿಗೆ ತಲಾ ರೂ. 10,000 ಗಳ ವರೆಗೆ ಒಟ್ಟು ರೂ. 35.23 ಲಕ್ಷದಷ್ಟು ಸಾಲವನ್ನು ಒದಗಿಸಿದೆ. ಸದರಿ ಫಲಾನುಭವಿಗಳಲ್ಲಿ 279 ಪುರುಷರು ಹಾಗೂ 114 ಮಹಿಳೆಯವರು ಇರುತ್ತಾರೆ ಇವರೆಲ್ಲರೂ ಬಹುತೇಕ ಅಲ್ಪಸಂಖ್ಯಾತರಾಗಿರುತ್ತಾರೆ.



ಶ್ರೀ ಎಂ.ಬಿ. ಕಲಾಲ,
ಅಧ್ಯಕ್ಷರು

ಈ ಯೋಜನೆಯಲ್ಲಿ ಮಂಜೂರು ಮಾಡಿದ ಸಾಲಗಳ ವಸೂಲಿಯು ಶೇ. 100ರಷ್ಟು ಆಗಿರುತ್ತದೆ. ಹೆಚ್ಚು ಬಡ್ಡಿದರದ ಲೇವಾದೇವಿ ವ್ಯವಹಾರ ಮಾಡುವವರ ಸರಪಳಿಯಿಂದ ಈ ಜನರನ್ನು ಮುಕ್ತಗೊಳಿಸಿ ಸಮಾಜ ಸುಸೂತ್ರ, ಸುರಕ್ಷಿತ ಹಾಗೂ ನೆಮ್ಮದಿಯ ಆರ್ಥಿಕ ವಾಹಿನಿಗೆ ಈ ಜನರು ಸೇರಿ ಸಂತಸದಿಂದ ಜೀವನ ಮಾಡುತ್ತಿರುವುದು ತಿಳಿದು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಬಿ. ಕಲಾಲ ಇವರು ಹಾಗೂ ನಿರ್ದೇಶಕ ಮಂಡಳಿಯ ಸದ್ಯಸರು ತಮ್ಮ ಹರ್ಷವನ್ನು ವ್ಯಕ್ತಪಡಿಸಿದ್ದಾರೆ. ಸಹಕಾರಿಯು ಅನುಷ್ಠಾನಗೊಳಿಸಿದ ಈ ಯೋಜನೆಯು ಉಳಿದ ಸಹಕಾರಿಗಳಿಗೆ ಮಾದರಿಯಾಗಿರುತ್ತದೆ.



**ಯೋಜನೆಯ ಅನುಷ್ಠಾನ :**

ಯಾವುದೇ ಯೋಜನೆಯು ಉತ್ತಮ ಧ್ಯೇಯದಿಂದ ರೂಪಿಲ್ಪಡುವುದು ಆದರೇ ಅದರ ಯಶಸ್ಸು ಅದರ ಅನುಷ್ಠನಾದ ಮೇಲೆ ಅವಲಂಬಿಸಿರುತ್ತದೆ. ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವ ಆರ್ಥಿಕ ಸಂಸ್ಥೆಗಳಾದ ಸಹಕಾರಿ ಬ್ಯಾಂಕುಗಳು ಹಾಗೂ ಪತ್ತಿನ ಸಹಕಾರಿ ಸಂಸ್ಥೆಗಳಲ್ಲಿ ಸರ್ವ ಸಾಮಾನ್ಯವಾಗಿ ಬಂಗಾರ ಒತ್ತೆ ಸಾಲ, ಠೇವು ಸಾಲ, ಎನ್.ಎಸ್.ಸಿ. ಸಾಲ ಹಾಗೂ ಚಿಕ್ಕ ವಾಹನ ಸಾಲಗಳ ಮಂಜೂರಿ ಬಿಟ್ಟರೇ ಎಲ್ಲ ಸಾಲಗಳನ್ನು ಆಡಳಿತ ಮಂಡಳಿಯಾಗಲಿ ಅಥವಾ ಅವರಿಂದ ರಚಿತವಾದ ಉಪಸಮಿತಿಗಳಾಗಲಿ ಮಂಜೂರು ಮಾಡುತ್ತವೆ. ಇತರ ಯಾವುದೇ ಚಿಕ್ಕ ರಕ್ಕಮಿನ ಸಾಲಕ್ಕೆ ಬೇಡಿಕೆ ಇದ್ದರೂ ಅದು 15 ದಿನಕ್ಕೊಮ್ಮೆ ಅಥವಾ ತಿಂಗಳಿಗೆ ಒಮ್ಮೆ ಜರಗುವ ಆಡಳಿತ ಮಂಡಳಿ ಸಭೆಯಲ್ಲಿ ಎಲ್ಲ ನಿರ್ದೇಶಕರ ಮುಂದೆ ಚರ್ಚೆಗೆ ಬಂದು ಮಂಜೂರುಯಾಗಬೇಕು ಎಂಬ ಸಿದ್ದಾಂತ ಹಾಗೂ ಪದ್ದತಿಗಳು ಸಹಕಾರಿ ಸಂಸ್ಥೆಗಳಲ್ಲಿ ಇರುವುದುಂಟು. ಆದರೆ ಈ ಸೌಹಾರ್ದ ಸಹಕಾರಿಯಲ್ಲಿ ಇರುವ ಆಡಳಿತ ಪದ್ಧತಿಗಳು ವಿಭಿನ್ನವಾಗಿರುವವು.

ಸದಸ್ಯರ ಸೇವೆ ಹಾಗೂ ಅವುಗಳ ಪೂರೈಕೆಗಳೇ ನಮ್ಮ ಧ್ಯೇಯ ಎಂಬ ತತ್ವಗಳನ್ನು ಅಳವಡಿಸಿಕೊಂಡು ಈ ಆಡಳಿತ ಮಂಡಳಿಯು ಆರ್ಥಿಕವಾಗಿ ಬಳಲುತ್ತಿರುವ ಜನರ ಚಿಕ್ಕ ಪ್ರಮಾಣ ಆರ್ಥಿಕ ಸಹಾಯವನ್ನು ಒದಗಿಸಲು ಮೈಕ್ರೋ ಫೈನನ್ಸ್ (Micro Finance) ಸಾಲ ಯೋಜನೆಯನ್ನು ಅನುಷ್ಠಾನಗೊಳಿಸುವ ಅಧಿಕಾರ ವ್ಯವಸ್ಥಾಪಕರಿಗೆ ನೀಡಲಾಗಿದೆ. ವ್ಯವಸ್ಥಾಪಕರು ದಿನಂಪ್ರತಿ ಬಡವರ ಹಣಕಾಸಿನ ಅಗತ್ಯಗಳನ್ನು ತಿಳಿದುಕೊಂಡು ಠೇವು ಸಂಗ್ರಹಗಾರರ ಸಲಹೆಗಳನ್ನು ಹಾಗೂ ಸಹಾಯ ಪಡೆದು ಅಂತಹವರಿಗೆ ರೂ. 10,000ವರೆಗೆ ಪ್ರತಿದಿನ ಸಾಲ ಮಂಜೂರು ಮಾಡುವರು ಆಡಳಿತ ಮಂಡಳಿಯು ಈ ಅಧಿಕಾರವನ್ನು ಸಂಪೂರ್ಣವಾಗಿ ಅವರಿಗೇ ಒಪ್ಪಿಸಿದ್ದು ಈ ವಿಷಯದಲ್ಲಿ ವ್ಯವಸ್ಥಾಪಕರ ನಿರ್ಣಯವೇ ಅಂತಿಮವಾಗಿದೆ. ಈ ಯೋಜನೆಯಲ್ಲಿ ಸಾಲ ಮಂಜೂರಿಯೊಂದಿಗೆ ಅದರ ವಸೂಲಿಯು ಸಹ ಅಚ್ಚುಕಟ್ಟಾಗಿ 100 ಪ್ರತಿಶತ ಮಾಡಲಾಗುತ್ತಿದೆ.

ಸದರಿ ಸಹಕಾರಿಯ ಆಡಳಿತ ಮಂಡಳಿಯು ಚಿಕ್ಕ ವ್ಯಾಪರಸ್ಥರಿಗೆ, ಸಾರಿಗೆ, ವ್ಯವಸಾಯದಲ್ಲಿ ತೊಡಗಿದವರಿಗೆ, ಮಹಿಳೆಯರಿಗೆ ಹಾಗೂ ಚಿಕ್ಕ ಉದ್ದಿಮೆ ಮಾಡುವ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ಜನರಿಗೆ ಸಹಾನುಭೂತಿಯಿಂದ ಈ ಜನರ ಸಾಲ ಅರ್ಜಿಗಳನ್ನು ಪರಿಶೀಲಿಸಿ ಸಾಲ ಮಂಜೂರು ಮಾಡಿ ಆರ್ಥಿಕ ಸಹಾಯವನ್ನು ಒದಗಿಸುತ್ತ ಬಂದಿರುತ್ತದೆ. ಸಹಕಾರಿಯ ಸುಸ್ಥಿ ಸಾಲ ಬಾಕಿಯು 6.26% ಇದೆ.

ನಿರ್ದೇಶಕರುಗಳು ತಮ್ಮ ವೈಯಕ್ತಿಕ ಜವಾಬ್ದಾರಿಗಳ ಮೇಲೆ ಉಳಿದ ಬೇರೆ ಬೇರೆ ಸಾಲಗಳನ್ನು ಕೊಡಸುತ್ತಿದ್ದು ಅವುಗಳ ವಸೂಲಿಗಾಗಿ ತಾವು ವೈಯಕ್ತಿಕ ಕಾಳಜಿ ವಹಿಸಿ ಸಂಸ್ಥೆಯ ಹಿತವನ್ನು ಕಾಯುವುದರಲ್ಲಿ ಬಹಳಷ್ಟು ಆಸಕ್ತಿ ಹೊಂದಿರುತ್ತಾರೆ. ಪ್ರತಿ ತಿಂಗಳ ಸಭೆಯಲ್ಲಿ ನಿರ್ದೇಶಕರು ಮಂಜೂರು ಮಾಡಿಸಿದ ಸಾಲಗಳು, ಅವುಗಳ ವಸೂಲಿಗಳು ಹಾಗೂ ಸುಸ್ಥಿ ಬಾಕಿ ಆಗಿದ್ದರೆ ಅವುಗಳ ಸವಿಸ್ತಾರ ಮಾಹಿತಿಯನ್ನು ವ್ಯವಸ್ಥಾಪಕರು ಅಧ್ಯಕ್ಷರ ಸೂಚನೆ ಮೇರೆಗೆ ಸಭೆಗೆ ಸಲ್ಲಿಸುತ್ತಿದ್ದು ಅದರ ಮೇಲೆ ಸವಿಸ್ತಾರವಾಗಿ ಪರಿಶೀಲನೆಯಾಗಿ ಸುಸ್ಥಿ ಬಾಕಿ ವಸೂಲಿಗೆ ತಿವ್ರ ಕ್ರಮ ಕೈಕೊಳ್ಳಲಾಗುತ್ತಿದೆ. ದೈನಂದಿಕ ವ್ಯವಹಾರದಲ್ಲಿ ಅಧ್ಯಕ್ಷರು ಹೆಚ್ಚಿನ ಮುತವರ್ಜಿ ವಹಿಸಿ ಸಂಸ್ಥೆಯ ಆಗು–ಹೊಗುಗಳನ್ನು ಹಾಗೂ ಆರ್ಥಿಕ ಅಡಚಣೆಗಳನ್ನು ಅಲ್ಲದೇ ಠೇವು ವ್ಯವಹಾರಗಳನ್ನು ಖುದ್ದಾಗಿ ಪರಿಶೀಲಿಸುತ್ತಾರೆ ಇದರಿಂದಾಗಿ ಸಹಕಾರಿಯು ಉತ್ತಮ ಪ್ರಗತಿಯನ್ನು ಸಾಧಿಸಿದೆ. ಕೆಲವು ಸಹಕಾರಿ ಸಂಸ್ಥೆಗಳಲ್ಲಿ ಹೆಚ್ಚಿಗೆ ಬಡ್ಡಿದರಗಳನ್ನು ನಿಗದಿ ಪಡಿಸಿ ಠೇವು ಸಂಗ್ರಹಿಸುವ ಪದ್ದತಿಯು ಬಳಕೆಯಲ್ಲಿ ಉಂಟು, ಆದರೇ ಈ ಸಂಸ್ಥೆಯಲ್ಲಿ ಠೇವುಗಳ ಮೇಲೆ ಗರಿಷ್ಠ ಅವಧಿಗೆ 9.50 ಪ್ರತಿಶತ ಗರಿಷ್ಠ ಬಡ್ಡಿದರವನ್ನು ನಿಗದಿ ಪಡಿಸಲಾಗಿದೆ. ಹೀಗಿದ್ದರೂ ಸಂಸ್ಥೆಯ ಮೇಲೆ ಇದ್ದ ಶ್ರದ್ಧೆಯಿಂದ ಠೇವಿದಾರರು ತಮ್ಮ ಠೇವು ವ್ಯವಹಾರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸದರಿ ಸಹಕಾರಿಯಲ್ಲಿ ಮಾಡುವುತ್ತಿದ್ದಾರೆ. ■



ಲೇಖನ

– ಸೂರ್ಯಕಾಂತ ರ‍್ಯಾಕಲೆ
ಅಧಿಕಾರಿ, ಕ.ರಾ.ಸೌ.ಸ.ಸಹಕಾರಿ ನಿ.
ಬೆಳಗಾವಿ ವಿಭಾಗೀಯ ಕಛೇರಿ.

# "ಪ್ರಯತ್ನದಿಂದ ಗುರಿ ಸಾಧಿಸಲು ಸಾಧ್ಯ"

ಜಗತ್ತಿನಲ್ಲಿ ಎರಡು ಸಿದ್ಧಾಂತಗಳು ನಮ್ಮನ್ನು ಬಹುವಾಗಿ ಕಾಡುತ್ತಿವೆ ಅದೇ ಅದೃಷ್ಟ ಮೇಲೊ? ಪ್ರಯತ್ನ ಮೇಲೊ? ಎಂಬುವುದು ಜೀವನ ಪರ್ಯಂತ ಗೊಂದಲಮಯನ್ನಾಗಿ ಮಾಡಿದೆ. ಒಂದು ಸಿದ್ಧಾಂತ ಹೇಳುತ್ತದೆ ದೈವಬಲವಿಲ್ಲದೆ ಒಂದು ಹುಲ್ಲುಕಡ್ಡಿಸಹ ಅಲ್ಲಾಡುವುದಿಲ್ಲ, ಇನ್ನೊಂದು ಹೇಳುತ್ತದೆ ಪ್ರಯತ್ನವೆ ಮನುಷ್ಯನನ್ನು ನಡೆಸುತ್ತದೆ ಪುರಷ ಪ್ರಯತ್ನವೆ ಮನುಷ್ಯನ ಜೀವನವನ್ನು ರೂಪಿಸೂತ್ತದೆ.


ಕಾರ್ಯಸಿದ್ಧಿಯಾಗುವುದು ನಿರಂತರ ಪ್ರಯತ್ನದಿಂದಲೇ ಹೊರತು ಕೇವಲ ಆಸೆಯಿಂದ ಹಗಲುಗನಸನ್ನು ಕಂಡು ಅದೃಷ್ಟದಿಂದಲೇ ತಾನಾಗಿಯೇ ಕರ್ತಸಿದ್ಧಿಯಾಗುತ್ತದೆ ಎಂದು ಸುಮ್ಮನೆ ಕೂಡುವುದಲ್ಲ, ಕಾಡಿನ ರಾಜವೆನಿಸಿದ ಸಿಂಹ ಸುಮ್ಮನೆ ಕುಳಿತರೆ ಯಾವ ಮೃಗಗಳು ಬಂದು ಅದರ ಬಾಯಿಗೆ ಬೀಳುವುದಿಲ್ಲ. ಹೊಟ್ಟೆಗೆ ಅನ್ನವಿಲ್ಲದೆ ಹಸಿವೆಯಿಂದ ಅಸುನಿಗಬೇಕಾಗುತ್ತದೆ. ಬದಲಿಗೆ ಬೇಟೆಯಾಡಿಯೆ ಅದು ತನ್ನ ಪ್ರಯತ್ನದಿಂದ ಆಹಾರವನ್ನು ಸಂಪಾದಿಸಿ ಜೀವಿಸಬೇಕಾಗುತ್ತದೆ.

ನಿಂತ ನೀರಿನಲ್ಲಿ ಯಾವುದೇ ಪರಿಶ್ರಮವಿಲ್ಲ, ಆದರಿಂದ ಅದು ಒಂದು ದಿನ ಯಾವುದೇ ಗುರಿ ಸೇರದೆ ಅಲ್ಲಿ ಬತ್ತಿ ಹೋಗುತ್ತದೆ. ಆದರೆ ಹರಿಯುವ ನದಿಯ ನೀರಿನಲ್ಲಿ ಸಾಹಸವಿದೆ ಪ್ರಯತ್ನವಿದೆ ಅದು ಗುಡ್ಡ ಬೆಟ್ಟಗಳನ್ನು ಕೊರೆದು ಪ್ರಪಾತ ಜಲಪಾತಗಳಲ್ಲಿ ಧುಮುಕಿ ಕಲ್ಲು ಮುಳ್ಳುಗಳಲ್ಲಿ ಹರಿದು ತನ್ನ ಪ್ರಯತ್ನವನ್ನು ನಿರಂತರ ಜಾರಿಯಲ್ಲಿ ಇಡುವುದರಿಂದಲೇ ತನ್ನ ಅಂತಿಮ ಗುರಿಯಾದ ಸಾಗರವನ್ನು ತಲಪುತ್ತದೆ.

ಪ್ರಯತ್ನಕ್ಕೆ ಅನ್ವರ್ಥನೆನಿಸಿಕೊಂಡ ಬಿಹಾರದ ಒಬ್ಬ ಕೃಷಿ ಕಾರ್ಮಿಕನು ಯಾರು ನಂಬಲಿಕ್ಕಾಗದ ಒಂದು ಪವಾಡಸದೃಶ ಕೆಲಸ ಮಾಡಿದ್ದಾನೆ ಅಂತಹ ಕೆಲಸ ನಡೆಯುವುದು ಸಾಧ್ಯವೇ ಎಂದು ಜನರು ಸಂದೇಹ ಪಟ್ಟುಕೊಳ್ಳುವುದು ಸಹಜ.

ಅವನು ಒಬ್ಬನೆ ಏಕಾಂಗಿ ಸುರನಾಗಿ 300 ಅಡಿಯಷ್ಟು ಉದ್ದದ 25 ಅಡಿ ಎತ್ತರದ ಗುಡ್ಡವನ್ನು ಕಡಿದು ಎತ್ತಿನ ಗಾಡಿ ಹೋಗಲು ಅನುಕೂಲವಾಗುವಂತೆ ಮಾರ್ಗವನ್ನು ನಿರ್ಮಿಸಿದ್ದಾನೆ ಈ ಕೆಲಸವನ್ನು ಮಾಡಿ ಮುಗಿಸಲು ಅವನಿಗೆ 25 ವರ್ಷಗಳೇ ಬೇಕಾದವು ಇದರಿಂದ ಅವನಹಳ್ಳಿಯ ಜನರಿಗೆ 80 ಕಿ.ಮೀ. ಉದ್ದದ ದಾರಿಯನ್ನು ಸುತ್ತಿ ತಮ್ಮ ಸಮಿಪದ ಹಳ್ಳಿಗಳ್ಳಿಗೆ ಹೋಗಿಬರಬೇಕಾದ ದು:ಸ್ಥಿತಿ ತಪ್ಪಿದೆ. ಆ ಮಹಾನ್ ಕಾರ್ಯಮಾಡಿದವನು ಕೃಷಿ ಕಾರ್ಮಿಕ ದಶರಥ ಮಾಂಜಿ. ಅವನ ಜೀವನದಲ್ಲಿ ನಡೆದ ಒಂದು ಘಟನೆ ಈ ಆದರ್ಶ ಸಾಧನೆಗೆ ಅವನನ್ನು ಪ್ರೇರೆಪಿಸಿತು.

ಬುದ್ದ ಗಯಾದಿಂದ 50 ಕಿ.ಮೀ.ದೂರದಲ್ಲಿರುವ ಗೆಹ್ಲೋರ ಗ್ರಾಮಕ್ಕೆ ಸೇರಿದ ದಶರಥ ತನ್ನ ಹೊಲದಲ್ಲಿ ಕೆಲಸ ಮಾಡಲು ಹೋಗ ಬೇಕಾದರೆ, ನಿತ್ಯವೂ ದುರ್ಗಮವಾದ ಗುಡ್ಡವನ್ನು ದಾಟ ಹೋಗಬೇಕಾಗುತಿತ್ತು ಅವನ ಹೆಂಡತಿ ಪ್ರತಿ ದಿನ ತನ್ನ ಗಂಡನಿಗೆಂದು ರೊಟ್ಟಿ ಬುತ್ತಿ ಹೊತ್ತು ತರುತ್ತಿದ್ದಳು. ಅವಳು ಹೋಗುತ್ತಿದ್ದ ಕಾಲುದಾರಿ, ಭಾರಿ ಇಕ್ಕಟ್ಟಿನದಾಗಿತ್ತು. ಕೈಯಲ್ಲಿ ಬುತ್ತಿಗಂಟು ತಲೆಯ ಮೇಲೆ



ನೀರಿನ ಬಿಂದಿಗೆ ಇರಿಸಿಕೊಂಡು ಹೋಗಬೇಕಾಗುತಿತ್ತು ಅವರಿಬ್ಬರು ಪ್ರೀತಿಯಿಂದ ಅನ್ಯೂನ್ಯವಾಗಿ ಸುಖೀ ಜೀವನ ನಡೆಸುತ್ತಿದ್ದರು.

ಒಂದು ದಿನ ಅವಳು ಹೊಲಕ್ಕೆ ಬುತ್ತಿ ತರುತ್ತಿದ್ದಾಗ ಆಯಾ ತಪ್ಪಿ ಕೊರೆಕಲ್ಲುಗಳಲ್ಲಿ ಬಿದ್ದು ಬಿಟ್ಟಳು ಗಂಡನಿಗೆಂದು ತಂದಿದ ಬುತ್ತಿಯ ಗಂಟ್ಟಿನಲ್ಲಿದ್ದ ಆಹಾರ ಚೆಲ್ಲಾಪಿಲ್ಲಿಯಾಗಿ ನೀರಿನ ಬಿಂದಿಗೆ ಒಡೆದು ಚುರುಚುರಾಯಿತ್ತು ಕಾಲಿಗೆ ಪೆಟ್ಟಾಗಿ ಮೈಕೈಯಲ್ಲ ತರಚಿ ರಕ್ತಸ್ರಾವವಾಯಿತು. ಗಂಡನಿಗೆ ವಿಷಯ ತಿಳಿದು ಸಿಡಿಲು ಬಡಿದಂತಾಯಿತು.

ಆ ದಿನ ಅವನ ಮನಸ್ಸಿನಲ್ಲಿ ತಳಮಳ ಮಿಡುಕಾಟ ಆರಂಭ ವಾಯಿತು ಕೊನೆಗೆ ಅವನು ಒಂದು ನಿರ್ಧಾರಕ್ಕೆ ಬಂದು ತನ್ನ ಹೆಂಡತಿಗೆ ತೊಂದರೆ ಕೊಟ್ಟ ಆ ಗುಡ್ಡವನ್ನೆ ಕಡಿದು ದಾರಿ ಮಾಡಬೇಕೆಂದು ಅವನು ಮನಸ್ಸಿನಲ್ಲಿ ನಿಶ್ಚಯ ಮಾಡಿ, ಮರುದಿನವೇ ಕೆಲಸ ಆರಂಭಿಸಿದ ಅವನ ಗುಡ್ಡ ಕಡಿಯುವ ಕೆಲಸ ನೋಡಿ ಹಳ್ಳಿ ಜನರು ಸಂಬಂಧಿಕರು, ಅಕ್ಕಪಕ್ಕದವರು ಅವನನ್ನು ಹುಚ್ಚ ಎಂದು ಕರೆದರೂ ಆದರೆ ಮನಸ್ಸಿನಲ್ಲಿ ನಿಶ್ಚಯ ಮಾಡಿದ ಹುಚ್ಚು ಬಿಡುವಂಥದಲ್ಲ, ತನ್ನ ಪ್ರಯತ್ನವನ್ನು ಮೌನವಾಗಿ ಮುಂದುವರಿಸಿದ ದಶರಥ ಪ್ರತಿ ದಿನ ತನ್ನ ಕೂಲಿ ಕೆಲಸ ಮಾಡಿ ಬಂದು ಮಿಕ್ಕುಳಿದ ಸಮಯದಲ್ಲಿ ಈ ಕೆಲಸ ಮಾಡುತ್ತಿದ್ದ. ತಾನು ಹಿಡಿದ ಕೆಲಸ ಮುಗಿಸಲು ಅವನಿಗೆ 25 ವರ್ಷಗಳೇ ಬೇಕಾದವೂ ಅವನು ಯಾರಿಗೋಸ್ಕರ ಆ ದಾರಿಯನ್ನು ನಿರ್ಮಿಸಿದಾನೂ ಅದನ್ನು ನೋಡಲು ಅವನ ಹೆಂಡತಿ ಬದುಕಿರಲಿಲ್ಲ ತನ್ನ ಪ್ರಯತ್ನದಿಂದ ಆತ ದೀರ್ಘ ಕನಸನ್ನು ನನಸಾಗಿಸಿದ ಅವನನ್ನು ಹುಚ್ಚನೆಂದು ಕರೆದು ನಗೆಯಾಡುತ್ತಿದ್ದ ಜನರೆ ಆಮೇಲೆ ಅವನ ಕಾರ್ಯವನ್ನ ಪ್ರಸಂಶಿಲು ಪ್ರಾರಂಭಿಸಿ ಸನ್ಮಾನ ಮಾಡಿ ಸಾಧು ಮಹಾರಾಜ ಎಂದು ಕರೆಯಲು ಆರಂಭಿಸಿದರು ಗೆಹ್ಲೋರ ಎಂಬ ಆ ಹಳ್ಳಿಯ ಹೆಸರು ಈಗ ದಶರಥ ನಗರವಾಗಿದೆ.

ಆದರ್ಶ ಹಿಡಿದು ಹೋಗುವವನು ತನ್ನ ಕಾರ್ಯ ಸಫಲವಾಗುವವರೆಗೂ ಬಿಡುವುದಿಲ್ಲ. ತನ್ನ ಪ್ರಯತ್ನದಿಂದ ಸಾಧನೆ ಮಾಡಿ ಇನ್ನೊಬ್ಬರಿಗೆ ಆನಂದ ಕೊಡುವಲ್ಲಿ ಇರುವ ಸುಖ ಬೇರೆ ಯಾವುದರಲ್ಲಿ ಇಲ್ಲ. ನಾವೆಲ್ಲರೂ ಇವಾಗಿನಿಂದಲೆ ಪ್ರಯತ್ನದ ಕಡೆ ಹೆಜ್ಜೆ ಹಾಕಿ ನಮ್ಮ ಗುರಿ ಮುಟ್ಟೋಣ. ■

# "ನಾವು ಧೀಮಂತ ನಾಯಕರಾಗುವುದು ಹೇಗೆ? – ಈ 30 ಸಫಲತೆಯ ಸೂತ್ರಗಳನ್ನು ನಿಮ್ಮದಾಗಿಸಿಕೊಳ್ಳಿ

**ಸಂಸ್ಥೆಗಳಲ್ಲಿ ನಾಯಕತ್ವದ (Leadership) ಮಹತ್ವ :**

ಯಾವುದೇ ಸಂಸ್ಥೆಯು ಯಸಶ್ಸನ್ನು ಕಾಣಬೇಕಾದರೆ ಒಬ್ಬ 'ಧೀಮಂತ ನಾಯಕ'ನ ಅವಶ್ಯಕತೆ ಬಹುಮುಖ್ಯ ಪಾತ್ರವಹಿಸುತ್ತದೆ. ಈ ಸಂಸ್ಥೆಯು ಸಫಲತೆಯ ಹಾದಿಯಲ್ಲಿ ಸಾಗಿ, ಮುಂದುವರಿಯಬೇಕಾದರೆ ನಾಯಕನ ಗುಣಗಳು, ಕೌಶಲ್ಯಗಳು ಮತ್ತು ಮೌಲ್ಯಗಳು ಕೇಂದ್ರಬಿಂದುಗಳಾಗುತ್ತವೆ.

ಒಬ್ಬ ವ್ಯಕ್ತಿಯ ಅಥವಾ ಸಂಸ್ಥೆಯು ಸಾಧನೆಯ ಪಥದಲ್ಲಿ ನಡೆಯಲು ನಾಲ್ಕು ಸ್ಥರಗಳಲ್ಲಿ ಮುಖ್ಯವಾಗಿ ಗಮನ ನೀಡಬೇಕಾಗುತ್ತದೆ.

1) ವೈಯಕ್ತಿಕ (Personal)

2) ವೃತ್ತಿಪರ (Professional)

3) ಹಣಕಾಸಿನ (Financial)

4) ಸಾಮಾಜಿಕ (Social) ಅರ್ಥಾಥ್ "ಒಂದು ಸಂಸ್ಥೆ ಒಬ್ಬ ಯೋಗ್ಯ ನಾಯಕನ ಉದ್ದನೆಯ ನೆರಳು"

(An organization is the elongated shadow of an effective leader) ಅಂತಾ ಜ್ಞಾನಿಗಳು ಹೇಳುವುದರಲ್ಲಿ ತಪ್ಪಿಲ್ಲ.

**ಧೀಮಂತ ನಾಯಕನ 30 ಸಫಲತೆಯ ಸೂತ್ರಗಳು :**

ಯಾವುದೇ ಸಾಮಾನ್ಯ ವ್ಯಕ್ತಿ ಅಸಾಮಾನ್ಯ ನಾಯಕನಾಗಲು ಸಾಧ್ಯ, ಆದರೆ ಆ ವ್ಯಕ್ತಿ ಶಕ್ತಿಯಾಗಿ ಬೆಳೆಯುವಲ್ಲಿ ಈ ಕೆಳಗಿನ 30 ಸೂತ್ರಗಳನ್ನು ಅರಿತು, ಅರ್ಥಮಾಡಿಕೊಂಡು, ಅಳವಡಿಸಿಕೊಳ್ಳ ಬೇಕಾಗುತ್ತದೆ.

ಅವುಗಳನ್ನು ಸಂಕ್ಷಿಪ್ತವಾಗಿ ತಿಳಿದು ಕೊಳ್ಳೋಣ ಬನ್ನಿ.



– ಡಾ.ನಂದೀಶ ಹಿರೇಮಠ
ಆಡಳಿತ ಸಲಹೆಗಾರ ಹಾಗೂ ತರಬೇತಿದಾರ.

1) **ಗುರಿಗಳು (Goods) :** ನಾಯಕನಾಗ ಬೇಕಾದ ವ್ಯಕ್ತಿ ಮೊಟ್ಟಮೊದಲಿಗೆ ತಾನು ಸಾಧಿಸಬೇಕಾದ ಗುರಿಗಳು ಅರಿವು–ಜ್ಞಾನ–ಸ್ಪಷ್ಟೆ ಬಹುಮುಖ್ಯ. ಅದರಲ್ಲೂ ಧನಾತ್ಮಕ ಮನೋಭಾವನೆ (Positive Mental Attitude) ಇರಬೇಕಾದ್ದು ಅತೀ ಅವಶ್ಯ.

2) **ಪಾತ್ರ ಹಾಗೂ ಜವಾಬ್ದಾರಿಗಳು (Roles & Responsibilitie) :** ಗುರಿಗಳ ಅರಿವಿನ ನಂತರ ತಾನು ನಿರ್ವಹಿಸಬೇಕಾದ ಪಾತ್ರಗಳ ಬಗ್ಗೆ ಹಾಗೂ ಹೆಗಲೇರಿಕೊಳ್ಳಬೇಕಾದ ಜವಾಬ್ದಾರಿಗಳ ಸಂಪೂರ್ಣ ಮಾಹಿತಿ ಇರಬೇಕು. ಅದಲ್ಲದೆ ಅವುಗಳ ಸ್ವಂತಿಕೆ (Ownership) ಮನೋಭಾವ ಅಂತರ್ಗತದಿಂದ ಬರಬೇಕು.

3) **ವಿಶಾಲದೃಷ್ಟಿ (Broad thinking) :** ಯಾವುದೇ ಕೆಲಸ ಅಥವಾ ಕಾರ್ಯ ಸಫಲತೆ ಹೊಂದಬೇಕಾದರೆ ವಿಶಾಲವಾಗಿ ವಿಚಾರಿಸುವ ಮನೋಭಾವನೆ ಮುಖ್ಯವಾಗುತ್ತದೆ ಮತ್ತು ಸಂಕುಚಿತ ಮನೋಭಾವನೆ ಕಡಿಮೆಯಾಗಬೇಕು.

4) **ತಕ್ಕದಾದ ಯೋಜನೆಗಳು (Effective planning) :** ಬರಿ ಒಳ್ಳೆಯ "ಯೋಚನೆಗಳಿದ್ದರೆ ಸಾಲದು, ಅವುಗಳನ್ನು ಅಳವಡಿಸಿ ಕೊಳ್ಳಲು ತಕ್ಕದಾದ "ಯೋಜನೆ"ಗಳು ಬೇಕಾಗುತ್ತದೆ. ಈ ಕಾರ್ಯತಂತ್ರಗಳು (Plan of Action) ಸರಳವಾಗಿದ್ದು ಸಮಗ್ರವಾಗಿರಬೇಕು ಮತ್ತು ನಿಜಸ್ಥಿತಿಗೆ ಸಮೀಪವಾಗಿದ್ದರೆ ಸಫಲತೆ ಸಾಧಿಸುವುದು ಸಲಭಸಾಧ್ಯ.

5) **ಸಂವಹನಾ ಕೌಶಲ್ಯಗಳು (Communication skills):** ತನ್ನ ವಿಚಾರಗಳನ್ನು ತಂಡದವರಿಗೆ ತಳಿಸಿಕೊಡುವ ಮತ್ತು ಮನವರಿಕೆ ಮಾಡಿಕೊಳ್ಳುವಂತೆ ಮಾಡಲು ಸೂಕ್ಷ್ಮಗ್ರಾಹಿ ಸಂವಹನಾ ಕೌಶಲ್ಯಗಳು ಬೇಕು.

6) **ಅನ್ಯೋನ್ಯ ಸಂಬಂಧ ಬೆಳೆಸುವ ಚಾಕಚಕ್ಯತೆ (Interpersonal relationship skill) :** ಸಂಸ್ಥೆಯ ಒಳಗೆ ಮತ್ತು ಹೊರಗೆ ಇರುವ ಎಲ್ಲಾ ವ್ಯಕ್ತಿಗಳ ಜೊತೆ, ಗ್ರಾಹಕರ ಜೊತೆ, ಸರಕಾರಿ ಅಥವಾ ಇತರೆ ಸಂಸ್ಥೆಗಳ ಜೊತೆಗೆ ಅನ್ಯೋನ್ಯವಾದ ಸಂಬಂಧ ಬೆಳೆಸಿಕೊಂಡು, ಉಳಿಸಿಕೊಂಡು, ಬೆಳೆಯುವುದು ಒಂದು ವಿಶೇಷ ಕಲೆ. ಇದನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು.

7) **ಒಳ್ಳೆಯ ಆಲಿಸುವಿಕೆ ಗುಣ (Good Listening skills):** ಯಾವುದೇ ಒಳ್ಳೆಯನಾಯಕನ ಅತಿ ಮುಖ್ಯ ಗುಣವೆಂದರೆ ಮಾತನಾಡುವುದಕ್ಕಿಂತ ಲಕ್ಷಕೊಟ್ಟು – ವಿಚಾರವಂತಿಕೆಯಿಂದ ಸೂಕ್ಷ್ಮಗ್ರಾಹಿಯಾಗಿ ಆಲಿಸುವ ಪರಿಪಾಠ ಹಾಗೂ ಆಲಿಸಿದ ವಿಚಾರಗಳನ್ನು ವಿಶ್ಲೇಷಿಸಿ ಕಾರ್ಯರೂಪಕ್ಕೆ ತರುವುದು.

8) ನಿರ್ಧಾರ ತೆಗೆದುಕೊಳ್ಳುವ ಗುಣಗಳು **(Decision making Skills):** ನಮ್ಮ ಜೀವನದ ಪ್ರತಿ ಹೆಜೆಯಲ್ಲೂ ಹತ್ತಾರು ಮತ್ತು ನೂರಾರು ನಿರ್ಧಾರ ತೆಗೆದುಕೊಳ್ಳುವುದು ಅನಿವಾರ್ಯತೆ. ಈ ನಿಟ್ಟಿನಲ್ಲಿ ತತ್ವಾಧಾರಿತ ವಿಶ್ಲೇಷಣೆಮಾಡಿ, ಸಾಧಕ–ಬಾಧಕಗಳನ್ನು ಅವಲೋಕಿಸಿ, ಯಾವುದೇ ಆಸೆ–ಆಮಿಷಗಳಿಗೆ ಬಲಿ ಬೀಳದೆ ತೆಗೆದುಕೊಂಡ ನಿರ್ಧಾರಗಳು ಒಳ್ಳೆಯದನ್ನೇ ಮಾಡುತ್ತವೆ.

9) **ಬೇರೆಯವರಿಂದ ಕೆಲಸ ಮಾಡಿಸುವ ಕೌಶಲ್ಯ (Delegation Skill) :** ನಮ್ಮ ಪಾಡಿಗೆ ನಾವು ಮಾತ್ರ ಸಮರ್ಥ ಕೆಲಸ ಮಾಡಿದರೆ ಸಾಕಾಗುವುದಿಲ್ಲ, ಅದರ ಜೊತೆಗೆ ಬೇರೆಯವರನ್ನೂ ತಮ್ಮ ಕೆಲಸ ಅರಿತುಕೊಂಡು – ಜವಾಬ್ದಾರಿಯನ್ನು ಹೊತ್ತು ಹೊಣೆಗಾರಿ ಕೆಯಿಂದ ಕೆಲಸ ಮಾಡುವಂತೆ ಮಾಡುವ ಕೌಶಲ್ಯ ನಾಯಕನಿಗೆ ಅತಿ ಮುಖ್ಯ.

10) **ಸಮಸ್ಯೆ ನಿರ್ವಹಣಾ ಸಾಮರ್ಥ್ಯ (Problem solving) :** ಒಬ್ಬ ವ್ಯಕ್ತಿಯಾಗಲಿ ಅಥವಾ ಯವುದೇ ಸಂಸ್ಥೆಯಾಗಲಿ ವಿವಿಧ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾದ ಅನಿವಾರ್ಯತೆ – ಅವಶ್ಯಕತೆ ಇದ್ದೇ ಇರುತ್ತದೆ. ಇವೆಲ್ಲ ಸಮಸ್ಯೆಗಳನ್ನು ಸಮರ್ಥ ವಾಗಿ – ಸಮರ್ಪಕವಾಗಿ ನಿಭಾಯಿಸುವ ಕೌಶಲ್ಯ ನಾಯಕನಿಗೆ ಅತಿ ಅವಶ್ಯ.

11) **ಸಂಯೋಜಕತ್ವ ಗುಣ (Coordinating skills) :** ಯಾವುದೇ ಸರಳ ಅಥವಾ ಕ್ಲಿಷ್ಟ ವಿಷಯಗಳನ್ನು ನಿಭಾಯಿಸುವಾಗ ಪ್ರಜಾತಂತ್ರ ತತ್ವದಿಂದ ಹಾಗೂ ಭೇಧಭಾವ ಇಲ್ಲದೆ ಸಂಯೋಜಿಸುವುದು ಒಂದು ವಿಶೇಷ ಕಲೆ, ಇದು ಸಫಲ ನಾಯಕನಿಗೆ ಇರಬೇಕಾದ ಮುಖ್ಯ ಗುಣ.

16ನೇ ಪುಟಕ್ಕೆ...

# ಸೌಹಾರ್ದ ಚಳವಳಿಯಿಂದ ಸಹಕಾರಿ ಕ್ಷೇತ್ರಕ್ಕೆ ಬಲಬಂದಂತಾಗಿದೆ – ಅಪ್ಪಸಾಹೇಬ ಪಟ್ಟಣಶೆಟ್ಟಿ, ಶಾಸಕರು





ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಕ್ರೆಡಿಟ ಕೋ–ಆಪರೇಟಿವ್ ಸೊಸೈಟಿಸ್ ಅಸೋಸಿಯೆಷನ್ ಹಾಗೂ ಬಿಜಾಪೂರು ಜಿಲ್ಲಾ ಸಹಕಾರಿ ಯೂನಿಯನ್ ಇವರುಗಳ ಸಹಯೋಗದೊಂದಿಗೆ ದಿನಾಂಕ: 16–07–2012ರಂದು ಶ್ರೀ ಸಿದ್ದೇಶ್ವರ ಸಹಕಾರಿ ಬ್ಯಾಂಕಿನ ಡಾ॥ ಫ. ಗು. ಹಳಕಟ್ಟಿ ಸಭಾ ಭವನದಲ್ಲಿ ಜಿಲ್ಲೆಯ ಸೌಹಾರ್ದ ಸಹಕಾರಿ ಹಾಗೂ ಪತ್ತಿನ ಸಹಕಾರಿ ಸಂಘಗಳಿಗೆ ಒಂದು ದಿನದ ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ" ಈ ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಬಿಜಾಪುರ ನಗರದ ಜನಪ್ರಿಯ ಶಾಸಕರು ಹಾಗೂ ಶ್ರೀ ಸಿದ್ದೇಶ್ವರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅಪ್ಪಸಾಹೇಬ ಪಟ್ಟಣ ಶೆಟ್ಟಿಯವರು ಉದ್ಘಾಟಿಸಿ, ಮಾತನಾಡುತ್ತಾ, ರಾಜ್ಯದಲ್ಲಿ ಸೌಹಾರ್ದ ಚಳುವಳಿಯಿಂದಾಗಿ ಸಹಕಾರಿ ಕ್ಷೇತ್ರಕ್ಕೆ ಬಲಬಂದಂತಾಗಿದೆ, ಸೌಹಾರ್ದ ಸಹಕಾರಿಗಳು ನೀಡುತ್ತಿರುವ ಈ ಗುಣಮಟ್ಟ ಸೇವಯಿಂದಾಗಿ ಸಹಕಾರಿಗಳು ಸಹಕಾರ ಕ್ಷೇತ್ರದ ಮೇಲೆ ಕಳೆದುಕೊಂಡಿರುವ ನಂಬಿಕೆ ಪುನಃ ವಿಶ್ವಾಸ ತಂದಿರುವುದು ನಮ್ಮೆಲ್ಲರಿಗೂ ಸಂತೋಷಕರ ವಾದ ವಿಷಯ ವೆಂದು ಅಭಿಪ್ರಾಯಪಟ್ಟರು.

ಸಂಯುಕ್ತ ಸಹಕಾರಿಯ ಬಿಜಾಪುರ ಜಿಲ್ಲಾ ನಿರ್ದೇಶಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅರುಣ ಶಹಾಪೂರರವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತ ಸೌಹಾರ್ದ ಚಳುವಳಿಯಿಂದಾಗಿ ಯುವ ಸಹಕಾರಿ ಪಡೆ ಸಹಕಾರಿ ಕ್ಷೇತ್ರಕ್ಕೆ ಬರಲು ಸಾಧ್ಯವಾಯಿತು ಆದ್ದರಿಂದ ಯುವ ಸಹಕಾರಿ ಗಳಿಂದ ರಾಜ್ಯದಲ್ಲಿ ವಿವಿಧ ರೀತಿಯ ನೂರಾರು ಸೌಹಾರ್ದ ಸಹಕಾರಿಗಳು ಪ್ರಾರಂಭಗೊಂಡು ರಾಜ್ಯಾದ್ಯಂತ ಉತ್ತಮ ಸೇವೆ ನೀಡುವಂತೆ ಉತ್ತಮ ತರಬೇತಿ ಮಾರ್ಗದರ್ಶನ ಮಾಡುತ್ತಿರುವ ಸಂಯುಕ್ತ ಸಹಕಾರಿ ಪಾತ್ರ ಅತ್ಯಂತ್ಯ ಮಹಾತ್ವದಾಗಿದೆ ಎಂದರು.

ಬಿಜಾಪುರ ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷರಾದ ಶ್ರೀ ಜಿ.ಸಿ. ಯಡವಣ್ಣವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.

ತರಬೇತಿಯಲ್ಲಿ 25 ಸೌಹಾರ್ದ ಸಹ ಕಾರಿಗಳ 36 ಜನ ಪ್ರತಿನಿಧಿಗಳು ಹಾಗೂ 13 ಸಹಕಾರಿ ಸಂಘಗಳ 17 ಜನ ಪ್ರತಿನಿಧಿಗಳು ಸೇರೆದಂತೆ ಒಟ್ಟು 70 ಕ್ಕಿಂತ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಂಡರು.

## ಸ್ವಯಂ ಕೃಷಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು. ಇದರ ಆಡಳಿತ ಮಂಡಳಿಯನ್ನು ವಜಾಗೊಳಿಸಿ ಆಡಳಿತಾಧಿಕಾರಿ ನೇಮಕ

ಸಂಯುಕ್ತ ಸಹಕಾರಿಯು ದಿನಾಂಕ 23.07.2012ರ ಸಂಖ್ಯೆ : ಸಂಸ/ಬಿಜಿಯು–108/2012ರ ಆದೇಶದ ಮೂಲಕ ಸ್ವಯಂ ಕೃಷಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಬೆಂಗಳೂರು ಇದರ ಆಡಳಿತ ಮಂಡಳಿಯು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆಂಬ ಹಿನ್ನೆಲೆ ಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 38(1)(i), 38(1)(ii),38(1)(iv) ಮತ್ತು 38(1)(vi) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಸಹಕಾರಿಯ ಆಡಳಿತ ಮಂಡಳಿಯನ್ನು ವಜಾಗೊಳಿಸಿ ಶ್ರೀ ವೈ. ಕುಮಾರ್, ಉಪ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., 'ನಿರ್ಮಾಣ ಭವನ', ಡಾ.ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು ಇವರನ್ನು ಆಡಳಿತಾಧಿಕಾರಿಗಳನ್ನಾಗಿ ನೇಮಕ ಮಾಡ ಲಾಗಿದೆ. ಆಡಳಿತಾಧಿಕಾರಿಗಳ ಅವಧಿ ಅವರು ಅಧಿಕಾರ ವಹಿಸಿಕೊಂಡ ದಿನದಿಂದ ಆರು ತಿಂಗಳುಗಳವರೆಗೆ ಇರುತ್ತದೆ ಎಂದು ಸಂಯುಕ್ತ ಸಹಕಾರಿಯ ಆದೇಶದಲ್ಲಿ ತಿಳಿಸಲಾಗಿದೆ.

# ಕೊಳ್ಳುಬಾಕ ಸಂಸ್ಕೃತಿಯಿಂದ ಅಮೇರಿಕದಲ್ಲಿ ಆರ್ಥಿಕ ಹಿನ್ನಡೆ

## – ಶ್ರೀ ಎಸ್.ಆರ್.ಸತೀಶ್ ಚಂದ್ರ





ಜಗತ್ತಿನಲ್ಲಿ ಇಂದು ಕೊಳ್ಳಬಾಕ ಸಂಸ್ಕೃತಿ ಭಾವನೆ ಬೆಳೆಯುತ್ತಿರುವುದರಿಂದ ಇಂದು ಅಮೇರಿಕದಂತಹ ದೇಶವು ಆರ್ಥಿಕ ಹಿನ್ನಡೆ ಹೊಂದಿದೆ ಎಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ ಚಂದ್ರ ಅವರು ಅಭಿಪ್ರಾಯಪಟ್ಟರು.

ಕುಮಟಾ ಕೆ.ಡಿ.ಸಿ.ಸಿ ಬ್ಯಾಂಕ್ ಸಭಾ ಭವನದಲ್ಲಿ ನಡೆದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಇವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಕರ್ನಾಟಕ ರಾಜ್ಯ ಕ್ರೆಡಿಟ ಕೋ-ಆಪರೇಟಿವ್ ಸೊಸೈಟಿಸ್ ಆಸೋಸಿಯೆಷನ್ (ರಿ) ಹಾಗೂ ಉತ್ತರ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ನಿ., ಕುಮಟಾ ಇವರ ಸಹಯೋಗದೊಂದಿಗೆ ದಿನಾಂಕ : 25-07-2012 ಬುಧವಾರ ಜಿಲ್ಲೆಯ ಸೌಹಾರ್ದ ಸಹಕಾರಿ ಹಾಗೂ ಪತ್ತಿನ ಸಹಕಾರಿ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಹಮ್ಮಿಕೊಂಡ ಒಂದು ದಿನದ ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ತರಬೇತಿಯನ್ನು ಉದ್ಘಾಟಿಸಿದರು.

ಭಾರತದ ಆರ್ಥಿಕತೆ ಬಲಾಢ್ಯವನ್ನು ಹೊಂದಿದೆ. ಏಕೆಂದರೆ ಭಾರತೀಯರಲ್ಲಿ ಉಳಿತಾಯದ ಮನೋಭಾವನೆ ಮನೆ-ಮನೆಯಲ್ಲಿ ಕಿರಿಯವರಿಂದ ಹಿರಿಯವರಲ್ಲಿ ಇರುವುದರಿಂದ ತಮ್ಮ ಆದಾಯದ ಸರಾಸರಿ 30-35% ಉಳಿತಾಯವನ್ನು ಮಾಡುತ್ತಾರೆ. ಆದರೇ ಅಮೇರಿಕದಂತಹ ಪಾಚ್ಚಿಮಾತ್ಯ ರಾಷ್ಟ್ರಗಳಲ್ಲಿ -1% ಉಳಿತಾಯವನ್ನು ಹೊಂದಿದ್ದಾರೆ ಇದರಿಂದಾಗಿ ಅಲ್ಲಿನ ವಿಮೆ ಕಂಪನಿಗಳ ಮೇಲೆ ಸಹ ವಿಶ್ವಾಸವನ್ನು ಹೊಂದಿಲ್ಲ ಆದ್ದರಿಂದ ಆರ್ಥಿಕ ಹಿನ್ನಡೆಯನ್ನು ಅನುಭವಿಸಬೇಕಾಯಿತು ಎಂದು ತಿಳಿಸಿದರು.

ಕಳೆದ ಒಂದು ದಶಕದ ಹಿಂದೆ ಪ್ರಾರಂಭವಾದ ಸೌಹಾರ್ದ ಸಹಕಾರಿಗಳು ಇಂದು ಸಹಕಾರ ಕ್ಷೇತ್ರದಲ್ಲಿ ಬೆಳವಣಿಗೆಯನ್ನು ಹೊಂದಿ ಸಹಕಾರಿ ಕ್ಷೇತ್ರಕ್ಕೆ ಬಲವನ್ನು ತಂದಿದೆ. ಇದರಲ್ಲಿರುವ ಒಳ್ಳೆ ಅಂಶಗಳನ್ನು ಗಮನಿಸಿ ಇತ್ತಿಚೆಗೆ ಕೇಂದ್ರ ಸರಕಾರವು ಕಾನೂನಿನಲ್ಲಿ ಬದಲಾವಣೆಗಳನ್ನು ತಂದಿದ್ದು ಸಂತೋಷಕರವಾಗಿದೆಯೆಂದು ಹೇಳಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉತ್ತರ ಕನ್ನಡ ಜಿಲ್ಲಾ ಸಹಕಾರ ಯೂನಿಯನಿನ ಅಧ್ಯಕ್ಷರಾದ ಶ್ರೀ ವಿ. ಎನ್ ಭಟ್ ಆಳ್ವಂಕಿಯವರು ಹಾಗೂ ಮುಖ್ಯ ಅತಿಥಿಗಳಾಗಿ ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಕೆ.ಡಿ.ಸಿ.ಸಿ ಬ್ಯಾಂಕ ನಿ., ಶಿರಸಿ ನಿರ್ದೇಶಕರಾದ ಶ್ರೀ ಆರ್. ಎಸ್. ಭಾಗವತ ಮತ್ತು ಕೆ.ಡಿ.ಸಿ.ಸಿ ಬ್ಯಾಂಕ ನಿ., ಕುಮಟಾದ ಶಾಖಾ ವ್ಯವಸ್ಥಾಪಕರಾದ ಶ್ರೀ ಎನ್. ಬಿ. ನೆತ್ರೇಕರ ಉಪಸ್ಥಿತರಿದ್ದರು.

ಮಾಯ ಹಾಗೂ ಸಂಗಡಿಗರ ಪ್ರಾರ್ಥನೆಯ ನಂತರ, ಪ್ರಸ್ತಾವಿಕ ನುಡಿಯನ್ನು ಶ್ರೀ ಜಿ.ಎಸ್. ಟೋಪಣ್ಣವರು ಹಾಗೂ ಕಾರ್ಯಕ್ರಮವನ್ನು ಉತ್ತರ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಎಸ್.ವಿ. ಹಿರೇಮಠರವರು ನೇರವೇರಿಸಿದರು.

ಬೆಳಗಿನ ಅವಧಿಯಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆ, 1997ರ ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಹಾಗೂ ಮುಖ್ಯಾಂಶಗಳು, 1959ರ ಕಾಯ್ದೆ ಹಾಗೂ 1997ರ ಸೌಹಾರ್ದ ಕಾಯ್ದೆಗಳಿಗೆ ಇವರು ವ್ಯತ್ಯಾಸಗಳು ಈ ವಿಷಯದ ಕುರಿತು ಶ್ರೀ ಎಸ್.ಜಿ. ಜೋಶಿ ನಿವೃತ್ತ ಸಹಾಯಕ ನಿಬಂಧಕರು ಹಾಗೂ ಮಧ್ಯಾಹ್ನದ ಅವಧಿ ಸಹಕಾರಿ ಸಂಸ್ಥೆಗಳಲ್ಲಿ ಗುಣಮಟ್ಟ ನಿರ್ವಹಣೆಯೆಂಬ ವಿಷಯದ ಬಗ್ಗೆ ಶ್ರೀ ಬಿ. ಎ. ಮಹಾದೇವಪ್ಪ ಅಪರ ನಿಬಂಧಕರು ಸಹಕಾರಿ ಸಂಘಗಳ ಇಲಾಖೆ ಇವರು ಉಪನ್ಯಾಸ ನೀಡಿದರು. ಮಧ್ಯಾಹ್ನ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್. ಸತೀಶ್ಚಂದ್ರರವರು ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿದರು.

ಈ ತರಬೇತಿಯಲ್ಲಿ 23 ಸೌಹಾರ್ದ ಸಹಕಾರಿಗಳ 36 ಜನ ಪ್ರತಿನಿಧಿಗಳು ಹಾಗೂ 12 ಸಹಕಾರಿ ಸಂಘಗಳ 15 ಜನ ಪ್ರತಿನಿಧಿಗಳು ಸೇರಿದಂತೆ ಒಟ್ಟು 60 ಕ್ಕಿಂತ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಲಾಭವನ್ನು ಪಡೆದುಕೊಂಡರು.

# ಪರಿಣಾಮಕಾರಿ ಸಂವಹನ



– ಶ್ರೀ ಬಿ.ಎ. ಮಹದೇವಪ್ಪ
ಅಪರ ನಿಬಂಧಕರು.

...ಹಿಂದಿನ ಸಂಚಿಕೆಯಿಂದ

**ಸಂವಹನದ ಬಗೆಗಳು :** ಸಂವಹನವನ್ನು ಮೌಖಿಕ ಸಂವಹನ, ಲಿಖಿತ ಸಂವಹನ, ಶರೀರ ಭಾಷೆ ಎಂದು ಪ್ರಮುಖವಾಗಿ ಮೂರು ಬಗೆಯಲ್ಲಿ ವಿಂಗಡಿಸಬಹುದು. ಉಳಿದೆಲ್ಲ ರೀತಿಯ ಸಂವಹನಗಳು ಈ ವಿಭಾಗಗಳಲ್ಲೇ ಸೇರುತ್ತವೆ.

**ಮೌಖಿಕ ಸಂವಹನ :** ನಾವೇಕೆ ಮಾತನಾಡುತ್ತೇವೆ? ನಮ್ಮ ಬಗ್ಗೆ ಹೇಳಿಕೊಳ್ಳುವುದಕ್ಕೆ. ಮೂರನೇ ವ್ಯಕ್ತಿ ಬಗ್ಗೆ ಮಾತನಾಡುವುದಕ್ಕೆ. ನಮ್ಮ ವಾದವನ್ನು ಸಮರ್ಥಿಸುವುದಕ್ಕೆ. ಬೇಜಾರು ಕಳೆಯುವುದಕ್ಕೆ. ಬೇರೆಯವರ ತಪ್ಪುಗಳನ್ನು ಎತ್ತಿ ತೋರಿಸುವುದಕ್ಕೆ. ಸ್ನೇಹ ಬೆಳೆಸಿಕೊಳ್ಳುವುದಕ್ಕೆ. ಒಟ್ಟಿನಲ್ಲಿ ಮಾತನಾಡದೇ ಸುಮ್ಮನಿರಲು ಸಾಧ್ಯವೇ ಇಲ್ಲ! ಅವಶ್ಯಕತೆ ಇಲ್ಲದಾಗ ಮಾತನಾಡುವುದು ಕೆಲವು ಸಲ ಅಪಾಯಕಾರಿಯಾಗಿಯೂ ಪರಿಣಮಿಸುತ್ತದೆ. ಅವಶ್ಯಕತೆ ಇದ್ದಾಗ ಮಾತನಾಡದೇ ಇರುವುದು ಅಷ್ಟೇ ಅಪಾಯಕಾರಿ.



**ಒಂದು ಉದಾಹರಣೆ ಗಮನಿಸಿ :** ಗಂಡ ಏಳು ಭಾಷೆಗಳನ್ನಾಡುವ ಒಂದು ಸುಂದರ ಗಿಣಿಯನ್ನು ಖರೀದಿಸಿ ಹೆಂಡತಿಗೆ ಕಳಿಸಿದ. ಹೆಂಡತಿ, ಆ ಗಿಣಿಯನ್ನು ಕೊಂದು, ಗಂಡ ಬರುವಷ್ಟರಲ್ಲಿ ಅಡುಗೆ ಸಿದ್ಧಪಡಿಸಿದಳು.

**ಗಂಡ :** "ನೀನೆಂಥ ಕೆಲಸ ಮಾಡಿದೆ? ಆ ಗಿಣಿ ಏಳು ಭಾಷೆಗಳಲ್ಲಿ ಮಾತನಾಡುತ್ತಿತ್ತು".

**ಹೆಂಡತಿ :** "ಆ ಗಿಣಿಗೆ ಅಷ್ಟೊಂದು ಭಾಷೆಗಳು ಗೊತ್ತಿದ್ದಲ್ಲಿ ಯಾವುದಾದರೂ ಒಂದು ಭಾಷೆಯಲ್ಲಿ ನನ್ನೊಂದಿಗೆ ಮಾತನಾಡಿ ಅದರ ಜೀವವನ್ನು ಉಳಿಸಿಕೊಳ್ಳಬಹುದಿತ್ತಲ್ಲವೆ?

ಇದು ಅಗತ್ಯವಿದ್ದಾಗ ಮಾತನಾಡದಿದ್ದರೆ ಆಗುವ ಪರಿಣಾಮ.

ಈ ಜಗತ್ತಿನಲ್ಲಿ ಅನಾಹುತಗಳೇನಾದರೂ ನಡೆದಿದ್ದರೆ ಅವು ಬಂದೂಕಿನಿಂದಲ್ಲ, ಅಣುಬಾಂಬಿನಿಂದಲ್ಲ, ಅವೇನಿದ್ದರೂ ಮಾತುಗಳಿಂದ. ಮಾತು ಬೆಳ್ಳಿ, ಮೌನ ಬಂಗಾರ ಎಂದಿದ್ದಾರೆ ಹಿರಿಯರು. ಆದರೆ ಸರಿಯಾದ ವ್ಯಕ್ತಿಗಳೊಂದಿಗೆ, ಸರಿಯಾದ ವೇಳೆಯಲ್ಲಿ, ಸರಿಯಾದ ಉದ್ದೇಶದೊಂದಿಗೆ ಸರಿಯಾಗಿ ಮಾತನಾಡುವುದು ಪ್ಲಾಟಿನಂ ಎನ್ನೋಣ ನಾವು. ಮಾತುಗಳು ಹೃದಯದಿಂದ ಬಂದಾಗ ಭಾವನೆಗಳೆನಿಸಿಕೊಳ್ಳುತ್ತವೆ. ನಾವು ಅದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರೆ ಅವು ಬೆಳೆಯುತ್ತವೆ. ನಿರ್ಲಕ್ಷಿಸಿದರೆ ಅಲ್ಲಿಯೇ ಸಾಯುತ್ತವೆ. ಗೌರವಿಸಿದರೆ ಸದಾ ನಮ್ಮೊಂದಿಗಿರುತ್ತವೆ. ಮೌಖಿಕ ಸಂವಹನ ಮುಖಾಮುಖಿ, ದೂರವಾಣಿ ಅಥವಾ ಆಂತರಿಕ ಉಪಕರಣಗಳ ಮೂಲಕ ನಡೆಯುತ್ತದೆ. ಇದರಿಂದ ಹಣ, ಸಮಯದ ಉಳಿತಾಯ, ಸ್ಥಳದಲ್ಲೇ ಅನುಮಾನಗಳ ಪರಿಹಾರ, ವೈಯಕ್ತಿಕ ಸಂಬಂಧ ಸಾಧ್ಯವಾಗುತ್ತದೆ. ಪ್ರತಿಕ್ರಿಯೆಯನ್ನು ನೋಡಿ ಪರಿಣಾಮವನ್ನು ಊಹಿಸಬಹುದು.

**ಮೌಖಿಕ ಸಂವಹನದ ಇತಿಮಿತಿಗಳೆಂದರೆ :** ವಿಷಯ ದೀರ್ಘವಾಗಿದ್ದರೆ ಸ್ಪಷ್ಟೀಕರಣ ಬೇಕಾಗುತ್ತದೆ. ದೂರದ ಸ್ಥಳಗಳಿದ್ದರೆ, ದೂರವಾಣಿ ಸೌಲಭ್ಯವಿಲ್ಲದಿದ್ದರೆ, ದಾಖಲೆ ಬೇಕಿದ್ದಲ್ಲಿ ಮೌಖಿಕ ಸಂವಹನ ಕಷ್ಟವಾಗುತ್ತದೆ.

**ಲಿಖಿತ ಸಂವಹನ :** ಪತ್ರಗಳು, ಸುತ್ತೋಲೆಗಳು, ವರದಿಗಳು, ಫ್ಯಾಕ್ಸ್, ಈ-ಮೇಲ್ ಇತ್ಯಾದಿಗಳು ಲಿಖಿತ ಸಂವಹನದ ರೂಪಗಳು. ವಿಷಯವನ್ನು ವಿಶದವಾಗಿ ತಿಳಿಸಲು ದೂರ ಸ್ಥಳಗಳಿಗೆ ಸುದ್ದಿ ಕಳಿಸಲು, ದಾಖಲೆಗಳನ್ನು ಇಡಲು ಲಿಖಿತ ಸಂವಹನ ಉಪಯೋಗಕಾರಿಯಾಗಿದೆ. ವಿಳಂಬತೆಗೆ ಅವಕಾಶ, ವಿಷಯವು ದೀರ್ಘವಾಗಿದ್ದರೆ ಅರ್ಥವಾಗದಿರುವ ಸಾಧ್ಯತೆ ಲಿಖಿತ ಸಂವಹನದ ಕೊರತೆಗಳು.

**ಲಿಖಿತ ಸಂವಹನದ ಕುರಿತಂತೆ ವಿಧಾನವೊಂದನ್ನು ಗಮನಿಸಿ :**

ನೌಕರಿಗಾಗಿ ಸಲ್ಲಿಸಿದ ಅರ್ಜಿಯಲ್ಲಿನ ವ್ಯಕ್ತಿಯನ್ನು ತಕ್ಷಣದಲ್ಲಿ ತಾವು ನೇಮಕ ಮಾಡಿಕೊಳ್ಳುತ್ತಿಲ್ಲವಾದರೆ

"ನೀವು ಎರಡು ವಾರಗಳ ಹಿಂದೆ ಕಳುಹಿಸಿದ ಅರ್ಜಿಯಲ್ಲಿ ನಮ್ಮಲ್ಲಿನ ಒಂದು ಕೆಲಸಕ್ಕಾಗಿ ನೀವು ವಿನಂತಿಸಿದ್ದುದರ ಕುರಿತಾಗಿ ನಾವು ನಿಮಗೆ ತಿಳಿಯಪಡಿಸುವುದೇನೆಂದರೆ, ಸದ್ಯಕ್ಕೆ ನಾವು ನಿಮಗೆ ಯಾವುದೇ ನೌಕರಿಯನ್ನು ನೀಡಲು ಅಸಮರ್ಥರಾಗಿದ್ದೇವೆ. ಆದರೂ ಸಹ ನಿಮ್ಮ ಅನುಭವ ಹಾಗೂ ಪದವಿಗಳು ನಮಗೆ ಇಷ್ಟವಾಗಿರುವುದರಿಂದ, ಇನ್ನು 6 ತಿಂಗಳ ನಂತರ ನೀವು ನಮ್ಮನ್ನು ಸಂಪರ್ಕಿಸಬಹುದಾಗಿದೆ".

ಇದನ್ನು ಬೇರೆ ರೀತಿ ಹೇಳಬಹುದಲ್ಲವೆ. "ನಮ್ಮಲ್ಲಿ ನೌಕರಿಗೆಂದು ನೀವು ಕಳುಹಿಸಿದ ಅರ್ಜಿ ಬಂದಿದೆ. ಸದ್ಯಕ್ಕೆ ನಮ್ಮಲ್ಲಿ ಯಾವ ಕೆಲಸವೂ ಖಾಲಿ ಇಲ್ಲವೆಂದು ತಿಳಿಸಲು ವಿಷಾದಿಸುತ್ತೇವೆ. ಆದರೆ ನಿಮ್ಮ ವಿದ್ಯಾರ್ಹತೆ ಮತ್ತು ಅನುಭವಗಳು ನಮಗೆ ಸಂತಸ ತಂದಿವೆ. ಇನ್ನು 6 ತಿಂಗಳ ನಂತರ ನೀವು ನಮ್ಮನ್ನು ಸಂಪರ್ಕಿಸಬೇಕೆಂದು ಕೋರಲಾಗಿದೆ".

**ಶರೀರ ಭಾಷೆ : ಬಾಡಿ ಲಾಂಗ್ವೇಜ್ –** ಶಬ್ದಗಳ ನೆರವನ್ನು ಬಯಸದ ಭಾಷೆ, ಮಾತಿಗೂ ಬರಹಕ್ಕೂ ಮೀರಿದ ಭಾಷೆ ಇದೇ ಶರೀರ ಭಾಷೆ. ಪುಷ್ಪಕ ವಿಮಾನ ಚಲನಚಿತ್ರ ನೋಡಿದ್ದೀರಲ್ಲವೇ? ನಮ್ಮದೇ ಭಾವಭಂಗಿಗಳು, ಚಲನವಲನಗಳು ನಮ್ಮೊಳಗಿನ ಗುಟ್ಟುಗಳನ್ನು, ಸತ್ಯವನ್ನು ಬಿಚ್ಚಿಡುತ್ತವೆ. ಶರೀರದ ಅಲುಗಾಟವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವುದೇ ಹಾವಾಭಾವಾಧ್ಯಯನ. ಶೇ.7 ಶಬ್ಧಗಳಿಂದ, ಶೇ.38 ಧ್ವನಿಯಿಂದ, ಶೇ.55 ಅಂಗವಿನ್ಯಾಸಗಳಿಂದ ವ್ಯಕ್ತಿಗಳ ವರ್ತನೆಯನ್ನು ಬಾಡಿ ಲಾಂಗ್ವೇಜ್ ತಿಳಿಸುತ್ತದೆ. ಮುಖ – Face is the index of Mind ಎಂಬ ಆಂಗ್ಲೋಕ್ತಿಯೊಂದನ್ನು ನೀವು ಕೇಳಿಯೇ ಇರುತ್ತೀರಿ. ಒಬ್ಬ ವ್ಯಕ್ತಿ ಬುದ್ಧಿವಂತನೋ, ನೇರ ಸ್ವಭಾವದವನೋ, ಭಾವಜೀವಿಯೋ, ಎಂಬುದನ್ನು ಆತನ ಮುಖದಿಂದ ತಿಳಿಯುವ ಶಾಸ್ತ್ರವೇ ಸೈಕಾಲಜಿ. ಮುಖದಿಂದ ಕೋಪ, ಭಯ, ಸಂತೋಷ, ಆಶ್ಚರ್ಯ, ವಿಷಾದ, ಅಸಹ್ಯ – ಈ 6 ವರ್ತನೆಗಳನ್ನು ಅರ್ಥಮಾಡಿಕೊಳ್ಳಬಹುದು. ಕಣ್ಣುಗಳು ಕಣ್ಣಿನ ಚಲನೆ ಮಾತುಗಾರನ ಮನದಿಂಗಿತವನ್ನು ಥಟ್ಟನೆ ಹೇಳಿ ಬಿಡುತ್ತದೆ. ನೇರವಾಗಿ ನೋಡುತ್ತಾ ಮಾತನಾಡುವಿಕೆ ಆತ್ಮವಿಶ್ವಾಸವನ್ನು, ತಲೆ ಬಗ್ಗಿಸಿ/ಬೇರೆ ಕಡೆ ನೋಡುತ್ತಾ ಮಾತನಾಡುವುದು ಕೀಳರಿಮೆ/ಮಾತನಾಡುವಿಕೆಯ ವಿಷಯವನ್ನು ಮುಚ್ಚಿಡುವಿಕೆಗಳನ್ನು ಸೂಚಿಸುತ್ತದೆ. ■

# ಇ-ಸ್ಟಾಂಪಿಂಗ್ ಮಾಹಿತಿಗಾಗಿ ವೆಬ್‌ತಾಣ - http://www.shcilestamp.com



**ರಘುನಂದನ ಕೆ.**
ಸಹಪ್ರಧಾನ ವ್ಯವಸ್ಥಾಪಕ,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.


http://www.shcilestamp.com

ದಿನೇ ದಿನೇ ಬದಲಾಗುತ್ತಿರುವ ತಂತ್ರಜ್ಞಾನದ ಬೆಳವಣಿಗೆಯ ಕಾಲಘಟ್ಟದಲ್ಲಿ ಅನೇಕ ಸೇವೆಗಳನ್ನು ಅಂತರ್ಜಾಲದ ಮೂಲಕ ಜನ ಸಾಮಾನ್ಯರಿಗೆ ತಲುಪಿಸುವ ವ್ಯವಸ್ಥೆ ಜಾರಿಗೆ ಬರುತ್ತಲಿದೆ. ಸರ್ಕಾರವೂ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದ್ದು ಅನೇಕ ಸೇವೆಗಳನ್ನ ಇ-ಆಡಳಿತದ ಅಡಿಯಲ್ಲಿ ಜಾರಿಗೆ ತರುತ್ತಲಿದೆ. ಸಾಮಾನ್ಯ ಜನತೆಗೆ ಸುಲಭವಾಗಿ ತಲುಪಲು ಸಾಧ್ಯವಾಗುವಂತೆ ಅಂತರ್ಜಾಲ ವೆಬ್‌ತಾಣಗಳ ಮೂಲಕ ಮಾಹಿತಿ ಒದಗಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಗುತ್ತಿದೆ. ಛಾಪಾ ಕಾಗದ ಹಗರಣದ ನಂತರ ಮುದ್ರಾಂಕ ಶುಲ್ಕ ಸಂಗ್ರಹಣ ಕಾರ್ಯವನ್ನು ಪರಿಣಾಮಕಾರಿ ಹಾಗೂ ಸುರಕ್ಷಿತಗೊಳಿಸುವ ಸಲುವಾಗಿ ಅನೇಕ ಕ್ರಮಗಳನ್ನು ಜಾರಿಗೆ ತರಲಾಯಿತು. ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., (SHCIL) ಸಂಸ್ಥೆಯನ್ನು ಕೇಂದ್ರೀಯ ದಾಖಲಾತಿ ಸಂರಕ್ಷಣಾ ಸಂಸ್ಥೆಯನ್ನಾಗಿ (Central Record Keeping System) ಕೇಂದ್ರ ಸರ್ಕಾರ ನೇಮಿಸುವುದರೊಂದಿಗೆ ಮುದ್ರಾಂಕ ಶುಲ್ಕ ಸಂಗ್ರಹಣಾ ಕಾರ್ಯವನ್ನು ಇ-ಸ್ಟಾಂಪಿಂಗ್ ಪರಿಕಲ್ಪನೆಯಡಿ ತರಲಾಯಿತು.

ಆಧುನಿಕ ತಂತ್ರಜ್ಞಾನದ ಮೂಲಕ ಅನೇಕ ವ್ಯವಸ್ಥೆಗಳನ್ನು ಸುಲಭವಾಗಿ ಸಮಾಜಕ್ಕೆ ತಲುಪಿಸಬಹುದು. ಆದರೆ ಸಮಾಜಕ್ಕೆ ಅದು ಸುಲಭವೆನಿಸಬೇಕಿದ್ದರೆ ತಂತ್ರಜ್ಞಾನದ ಬಗೆಗೆ ಅರಿವು ಹಾಗೂ ಅದನ್ನು ಬಳಸಿಕೊಳ್ಳುವ ಮಾಹಿತಿಯೂ ಅವಶ್ಯಕವಾಗಿದೆ. ಭಾರತದಲ್ಲಿ ಮೊದಲ ಬಾರಿಗೆ ಇ-ಸ್ಟಾಂಪಿಂಗ್ ಸೇವೆಯನ್ನು ಸಹಕಾರ ಕ್ಷೇತ್ರದ ಮೂಲಕ ಜಾರಿಗೆ ತಂದದ್ದು ಕರ್ನಾಟಕದ ಹಾಗೂ ಸೌಹಾರ್ದ ಸಹಕಾರ ಕ್ಷೇತ್ರದ ವಿಶೇಷ. ಪ್ರಸ್ತುತ ಕನಾಟಕದಲ್ಲಿ ಸೌಹಾರ್ದ ಸಹಕಾರಿಗಳ 458 ಇ-ಸ್ಟಾಂಪಿಂಗ್ ಕೇಂದ್ರಗಳು ಸೇರಿದಂತೆ ಒಟ್ಟು 1034 ಇ-ಸ್ಟಾಂಪಿಂಗ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇ-ಸ್ಟಾಂಪಿಂಗ್ ಬಗ್ಗೆ ಹಾಗೂ ಸ್ಟಾಂಪ್ ಪೇಪರ್ ದೊರೆಯಬಹುದಾದ ಕೇಂದ್ರಗಳ ಬಗ್ಗೆ ಮಾಹಿತಿ ಒದಗಿಸುವ ವೆಬ್ ತಾಣದ ಪರಿಚಯ ಇಲ್ಲಿದೆ.

ವೆಬ್‌ತಾಣ 04 : http://www.shcilestamp.com

- ಈ ವೆಬ್‌ತಾಣದಲ್ಲಿ ಇ-ಸ್ಟಾಂಪಿಂಗ್ ಬಗೆಗಿನ ಮಾಹಿತಿ ಹಾಗೂ ಭಾರತದಲ್ಲಿ ಇ-ಸ್ಟಾಂಪಿಂಗ್ ವ್ಯವಸ್ಥೆಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರದಿಂದ ನಿಯೋಜಿತವಾದ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದ ಬಗೆಗಿನ ಸಂಪೂರ್ಣ ಮಾಹಿತಿಯನ್ನು ಪಡೆಯಬಹುದಾಗಿದೆ.
- ಸ್ಟಾಂಪ್ ಪೇಪರ್ ಪಡೆಯಲು ಸಲ್ಲಿಸಬೇಕಾದ ಅರ್ಜಿಯೂ ಸೇರಿದಂತೆ, ಇ-ಸ್ಟಾಂಪಿಂಗ್ ಕೇಂದ್ರಗಳಿಗೆ ಅಗತ್ಯವಾದ ಎಲ್ಲ ಅರ್ಜಿಗಳನ್ನು ವೆಬ್‌ತಾಣದ ಡೌನ್‌ಲೋಡ್ ವಿಭಾಗದಲ್ಲಿ ಪಡೆಯಬಹುದಾಗಿರುತ್ತದೆ.
- ಇ-ಸ್ಟಾಂಪಿಂಗ್‌ನಲ್ಲಿ ಬಳಸಲಾಗುವ ಪದಗಳ ಅರ್ಥ ಹಾಗೂ ಇ ಸ್ಟಾಂಪಿಂಗ್‌ಗೆ ಸಂಬಂಧಿಸಿದ ಸಾಮಾನ್ಯ ಪ್ರಶ್ನೆಗಳಿಗೆ ಉತ್ತರವನ್ನು ಇ ಸ್ಟಾಂಪಿಂಗ್‌ಗೆ ಸಂಬಂಧಿಸಿದ ಎಲ್ಲ ಮಾಹಿತಿಗಳೊಂದಿಗೆ ಈ




ವೆಬ್‌ತಾಣದಲ್ಲಿ (FAQ) ನೋಡಬಹುದಾಗಿದೆ.

- ಎಲ್ಲಕ್ಕಿಂತ ಮುಖ್ಯವಾಗಿ ರಾಜ್ಯವಾರು ಮುದ್ರಾಂಕ ಶುಲ್ಕ ಸಂಗ್ರಹಿಸುವ ಅಧಿಕೃತ ಸಂಗ್ರಹಣಾ ಕೇಂದ್ರಗಳ (ACC) ಅಂದರೆ ಸ್ಟಾಂಪ್ ಪೇಪರ್ ದೊರೆಯುವ ಕೇಂದ್ರಗಳ ಪಟ್ಟಿಯನ್ನು ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳೊಂದಿಗೆ ನೀಡಲಾಗಿದೆ. ಕರ್ನಾಟಕದಲ್ಲಿನ ಎಲ್ಲ 1034 ಕೇಂದ್ರಗಳ ಪಟ್ಟಿಯನ್ನು ಸಂಪರ್ಕ ವಿವರಗಳೊಂದಿಗೆ ಇಲ್ಲಿ ಪಡೆಯಬಹುದು.
- ಈ ವೆಬ್‌ತಾಣದಲ್ಲಿ ನೋಂದಣಿ ಮಾಡಬಹುದಾದ ಹಾಗೂ ನೋಂದಣಿ ಅವಶ್ಯಕತೆಯಿಲ್ಲದ (Registrable & Non Registrable Instruments) ದಾಖಲಾತಿಗಳ ಪಟ್ಟಿ ಹಾಗೂ ಅವುಗಳಿಗೆ ಪಾವತಿಸ ಬೇಕಾದ ಮುದ್ರಾಂಕ ಶುಲ್ಕದ ದರದ ವಿವರವನ್ನೂ ನೀಡಲಾಗಿದ್ದು ಪರಿಶೀಲಿಸಿ ಸ್ಟಾಂಪ್ ಪೇಪರ್ ಪಡೆಯಲು ಅನುಕೂಲ ಒದಗಿಸಲಾಗಿದೆ.
- ಕನಾಟಕದ ಎಲ್ಲ ಜಿಲ್ಲೆಗಳ ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಉಪ ನೋಂದಣಾಧಿಕಾರಿಗಳ ವಿಳಾಸ ಹಾಗೂ ಸಂಪರ್ಕ ಸಂಖ್ಯೆಗಳನ್ನು ಕೂಡ ಈ ವೆಬ್‌ತಾಣದಲ್ಲಿ ಪಡೆಯಬಹುದಾಗಿದೆ.
- ಮುದ್ರಾಂಕ ಶುಲ್ಕ ಪಾವತಿಯ ವಿವರಗಳನ್ನು ಸ್ಟಾಂಪ್ ಪೇಪರ್ ಅರ್ಜಿ ಸಂಖ್ಯೆ ಹಾಗೂ ಪಾವತಿ ದಿನಾಂಕವನ್ನು ನಮೂದಿಸುವುದರ ಮೂಲಕ ಪರಿಶೀಲಿಸುವ ಅವಕಾಶವನ್ನು ಕೂಡ ಒದಗಿಸಿರುವುದು ಈ ತಾಣದ ವಿಶೇಷ.
- ಈ ವೆಬ್‌ತಾಣದಲ್ಲಿ ಭಾರತದ ಯಾವ ಯಾವ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಇ-ಸ್ಟಾಂಪಿಂಗ್ ಜಾರಿಗೆ ಬಂದಿದೆ ಎನ್ನುವುದನ್ನು ತಿಳಿಯಬಹುದು. ಅಲ್ಲದೆ ಮುದ್ರಾಂಕ ಶುಲ್ಕ ಸಂಗ್ರಹಿಸುವ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಶಾಖೆಗಳ ವಿವರಗಳನ್ನು ಕೂಡ ಪಡೆಯಬಹುದು. ■

There was one error opening the page. For more information, choose Activity from the Window menu.

# ಗಂಗೊಳ್ಳಿ ಟೌನ್ ಸೌಹಾರ್ದಕ್ಕೆ ಸಂಯುಕ್ತ ಸಹಕಾರಿಯ ಅಧ್ಯಕ್ಷರ ಭೇಟಿ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್. ಸತೀಶ್ಚಂದ್ರ ರವರು ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿಯ ಕಛೇರಿಗೆ ದಿನಾಂಕ : 25/07/2012 ರಂದು ಭೇಟಿ ನೀಡಿ ಸಹಕಾರಿ ಚಟುವಟಿಕೆಯನ್ನು ಪರಿಶೀಲಿಸಿದರು.

ಸಹಕಾರಿಯ ಸಂಪೂರ್ಣ ಸುಸಜ್ಜಿತ ಕಟ್ಟಡ, ಇ–ಸ್ಟಾಂಪಿಂಗ್ ಸೌಲಭ್ಯ, ತ್ವರಿತಗತಿಯಲ್ಲಿ ನೀಡಲಾಗುವ ಚಿನ್ನಾಭರಣ ಹಾಗೂ ವಾಹನ ಖರೀದಿ ಸಾಲ, ಲಾಕರ್ ಸೌಲಭ್ಯಗಳನ್ನು ಹೊಂದಿ ರುವುದನ್ನು ವೀಕ್ಷಿಸಿ ಸಹಕಾರಿಯ ಸದಸ್ಯರಿಗೆ ನೀಡಲಾಗುತ್ತಿರುವ ಸೇವೆ ಮತ್ತು ಸಹಕಾರಿಯ ಕಾರ್ಯವೈಖರಿಯ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಬಳಿಕ ಮಾತನಾಡಿದ ಅವರು ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿಯು ಬ್ಯಾಂಕ್ ಆಗಿ ಪರಿವರ್ತನೆಗೊಳ್ಳುವ ಎಲ್ಲ ಅರ್ಹತೆಗಳನ್ನು ಹೊಂದಿದ್ದು ಈ ಸಹಕಾರಿಯ ಸೇವೆಯು ರಾಜ್ಯ ಮಟ್ಟಕ್ಕೆ ವಿಸ್ತರಿಸಬೇಕು. ಸಹಕಾರಿಯ ಬೆಳವಣಿಗೆಗೆ ಅವಶ್ಯವಿರುವ ಯೋಜನೆಗಳನ್ನು ರೂಪಿಸಿಕೊಂಡು ಸಹಕಾರಿಯ ಅಭಿವೃದ್ಧಿ ಬಗ್ಗೆ ಅಧ್ಯಯನ ಪ್ರವಾಸ ಕೈಗೊಂಡು ಹೊಸ ಹೊಸ ಆಲೋಚನೆಯೊಂದಿಗೆ ಸಹಕಾರಿಯು ಇನ್ನಷ್ಟು ಸೇವೆಗಳನ್ನು ಸದಸ್ಯರಿಗೆ ನೀಡುವಂತಾಗಲಿ ಎಂದು ಹಾರೈಸಿದರು.

ಸಹಕಾರಿಯ ಅಧ್ಯಕ್ಷರಾದ ಶ್ರೀ ಎಚ್. ಗಣೇಶ್ ಕಾಮತ್ ಉಪಾಧ್ಯಕ್ಷ, ಶ್ರೀ ಜಿ.ವೇದವ್ಯಾಸ ಆಚಾರ್ಯ, ನಿರ್ದೇಶಕರಾದ ಗೋಪಾಲಕೃಷ್ಣ ನಾಯಕ್, ಶ್ರೀ ಬಿ. ರಾಘವೇಂದ್ರ ಪೈ, ಶ್ರೀ ಜಿ. ವಿಶ್ವನಾಥ ಆಚಾರ್ಯ, ಶ್ರೀ ಬಿ. ಪ್ರಕಾಶ ಶಣೈ, ಶ್ರೀ ವೆಂಕಟೇಶ ನಾಯಕ್, ಕಾರ್ಯದರ್ಶಿ ಗಣೇಶ ನಾಯಕ್ ಹಾಗೂ ಸಿಬ್ಬಂಧಿಗಳು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಹಕಾರಿಯ ಪರವಾಗಿ ಹಿರಿಯ ನಿರ್ದೇಶಕ ಶ್ರೀ ಬೈಲೂರು ಮಂಜುನಾಥ ಶಣೈ ಸಂಯುಕ್ತ ಸಹಕಾರಿಯ ಅಧ್ಯಕ್ಷರನ್ನು ಸನ್ಮಾನಿಸಿ ಗೌರವಿಸಿದರು.

**ಸಹಕಾರಿಯ ವಿಶೇಷತೆಗಳು :**

1. ಪಾರದರ್ಶಕ ಆಡಳಿತ.
2. ಸಂಪೂರ್ಣ ಗಣಕೀಕೃತ ಲೆಕ್ಕಪತ್ರ.
3. ಜಿಲ್ಲೆಯಲ್ಲಿ ಮೊದಲ ಬಾರಿಗೆ ಕಂಪ್ಯೂಟರ್ ಮೂಲಕ ಪಿಗ್ಮಿ ಸಂಗ್ರಹ.
4. ಬೆಳಿಗ್ಗೆ 9.30 ರಿಂದ ಸಂಜೆ 5.00 ಗಂಟೆ ಯವರೆಗೆ ನಿರಂತರ ಬ್ಯಾಂಕಿಂಗ್ ಸೇವೆ.
5. ಕಡಿಮೆ ಬಡ್ಡಿ ದರದಲ್ಲಿ ತ್ವರಿತ ಚಿನ್ನಾಭರಣ ಸಾಲ.
6. ಕ್ಷಣ ಮಾತ್ರದಲ್ಲಿ ವಾಹನ ಖರೀದಿ ಸಾಲ
7. ಪಿಗ್ಮಿ ಮೂಲಕ ಸಾಲ ಮರುಪಾವತಿ ಸೌಲಭ್ಯ
8. ಮೀಟಿಂಗ್ ಭತ್ಯೆ ಇತ್ಯಾದಿ ಯಾವುದೇ ವೆಚ್ಚವನ್ನು ಸಂಸ್ಥೆಗೆ ಭರಿಸದೆ ಇತರ ಸಂಘಗಳಿಗೆ ಮಾದರಿಯಾಗಿರುವ ಆಡಳಿತ ಮಮಡಳಿ
9. ಆರಂಭದಿಂದಲೂ ಪ್ರತಿ ವರ್ಷ ಸದಸ್ಯರಿಗೆ ಡಿವಿಡೆಂಡ್ ಪಾವತಿ
10. ಸಾರ್ವಜನಿಕ ಉಪಕಾರ ನಿಧಿಯಿಂದ ಸಮುದಾಯಕ್ಕೆ ನಿರಂತರ ಕೊಡುಗೆ
11. ಸದಸ್ಯರ ಉಪಯೋಗಕ್ಕಾಗಿ 100ಕ್ಕೂ ಅಧಿಕ ಭದ್ರತಾ ಕೋಶಗಳ ಅಳವಡಿಕೆ
12. ಸದಸ್ಯರಿಗೆ ತಡೆರಹಿತ ಸೇವೆಗಾಗಿ ನಿರಂತರ ವಿದ್ಯುತ್ ಪೂರೈಸಲು 10 ಕೆ.ವಿ.ಯ ಜನರೇಟರ್ ಅಳವಡಿಕೆ
13. ತ್ವರಿತ ಚಿನ್ನಾಭರಣ ಸಾಲ ನೀಡುವ ಸಲುವಾಗಿ ಪ್ರತ್ಯೇಕ ಚಿನ್ನಾಭರಣ ಸಾಲದ ಕೌಂಟರ್

# ಶೃತಿ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಎ.ಟಿ.ಎಮ್. ಕಾರ್ಡ್ ಸೌಲಭ್ಯ



ಬೆಂಗಳೂರಿನ ಶೃತಿ ಸೌಹಾರ್ದ ಪತ್ತಿನ ಸಹಕಾರಿ ನಿ. ಪ್ರಾರಂಭವಾಗಿ 5 ವರ್ಷಗಳು ಕಳೆದಿದೆ. ಈ ಅವಧಿಯಲ್ಲಿ ತನ್ನದೇ ಆದ 3 ಶಾಖೆಗಳನ್ನು ಹೊಂದಿದ್ದು, ಇದರ ಜೊತೆಗೆ ವಿಶೇಷ ಸೌಲಭ್ಯಗಳಾದ ಡಿ.ಡಿ,ಆರ್‌ಟಿಜಿಎಸ್/ನೆಫ್ಟ್, ಡೀಮ್ಯಾಟ್ ಅಕೌಂಟ್&ಬಿ.ಎಸ್.ಇ/ಎನ್.ಎಸ್.ಇಆನ್‌ಲೈನ್/ ಆಫ್‌ಲೈನ್ ಷೇರ್ ಟ್ರೇಡಿಂಗ್, ವೆಸ್ಟ್ರನ್ ಯೂನಿಯನ್ ಮನಿಟ್ರಾನ್ಸ್‌ವರ್, ಇ–ಸ್ಟಾಪಿಂಗ್, ಇನ್ಸೂರೆನ್ಸ್, ಪಾನ್‌ಕಾರ್ಡ್, ಏರ್/ಬಸ್/ಕಾರ್/ ಹೋಟೆಲ್ ಬುಕಿಂಗ್, ಮೊಬೈಲ್ ರಿಚಾರ್ಜ್, ಯುಟಿಲಿಟಿ ಬಿಲ್‌ಪೇಮೆಂಟ್ ಹಾಗೂ ಚಿಟ್‌ಫಂಡ್ ಯೋಜನೆಯನ್ನು ಸದಸ್ಯರ ಕಷ್ಟ ಕಾಲದಲ್ಲಿ ತುರ್ತಾಗಿ ನೆರವಾಗುವ ಉದ್ದೇಶದಿಂದ ಅಭಿವೃದ್ಧಿಗೋಸ್ಕರ ಪ್ರಾರಂಭಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಅಂತೆಯೇ ಗ್ರಾಹಕರಿಗೆ/ಸದಸ್ಯರಿಗೆ ಸಹಾಯಕ್ಕಾಗಿ ಎ.ಟಿ.ಎಮ್. ರಿವಾರ್ಡ್ ಕಾರ್ಡ್ ಸೌಲಭ್ಯವನ್ನು ಆಕ್ಸಿಸ್ ಬ್ಯಾಂಕ್ ಜೊತೆ ಒಡಂಬಡಿಕೆ ಮಾಡಿಕೊಂಡು ನೀಡಲು ಮುಂದಾಗಿದೆ. ಇದನ್ನು ಶುಶೃತಿ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ಅಧ್ಯಕ್ಷರಾದಂತಹ ಶ್ರೀ ಎನ್.ಶ್ರೀನಿವಾಸಮೂರ್ತಿ ಅನಾವರಣಗೊಳಿಸಿದರು. ಅಧ್ಯಕ್ಷರಾದ ಶ್ರೀ ಜಿ.ಪುರುಷೋತ್ತಮ್ ಮತ್ತು ಆಡಳಿತಮಂಡಳಿ ಹಾಗೂ ಇತರರು ಭಾಗವಹಿಸಿದ್ದರು.

# ತರಬೇತಿ ಕಾರ್ಯಾಗಾರಗಳು : ಸಂಯುಕ್ತ ಸಹಕಾರಿಯ ಪ್ರಯತ್ನ ಶ್ಲಾಘನೀಯ– ಕೆ.ಎನ್.ರಾಜಣ್ಣ




ದಿ : 12.07.2012ರಂದು ತುಮಕೂರಿನಲ್ಲಿ ಸಹಕಾರಿಗಳ ಹೊಸತನ, ಬದಲಾವಣೆ ಹಾಗೂ ಅಭಿವೃದ್ಧಿಗಾಗಿ "ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ"ಯ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ಸ್ಟೇಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟೀಸ್ ಅಸೋಸಿಯೇಷನ್, ಬೆಂಗಳೂರು, ತುಮಕೂರು ಜಿಲ್ಲಾ ಸಹಕಾರ ಯೂನಿಯನ್ ನಿ., ತುಮಕೂರು ಇವರುಗಳ ಸಹಯೋಗದೊಂದಿಗೆ ದಿ : 12.07.2012ರಂದು ತುಮಕೂರು ಜಿಲ್ಲೆಯ ಕ್ರೆಡಿಟ್ ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗಾಗಿ ತುಮಕೂರು ಜಿಲ್ಲಾ ಸಹಕಾರಿ ಯೂನಿಯನ್, ತುಮಕೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಜಿ.ಲೀಲಾರವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು.

ಉದ್ಘಾಟನೆಯನ್ನು ಬೆಂಗಳೂರು ವಿಭಾಗದ ಜಂಟಿ ನಿಬಂಧಕರಾದ ಶ್ರೀ ಭೀಮಸೇನ ಬಂಕದ್‌ರವರು ನೆರವೇರಿಸಿದರು. ತುಮಕೂರು ಜಿಲ್ಲಾ ಡಿ.ಸಿ.ಸಿ. ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಕೆ.ಎನ್. ರಾಜಣ್ಣರವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ, ಕಲಿಕೆಗೆ ಕೊನೆ ಎಂಬುದಿಲ್ಲ, ಪರಸ್ಪರ ಕಲಿಕೆಗೆ ತರಬೇತಿ ಕಾರ್ಯಾಗಾರಗಳು ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯ ಪ್ರಯತ್ನ ಶ್ಲಾಘನೀಯ. ಪ್ರಾಥಮಿಕ ಸಹಕಾರಿ ಸಂಘಗಳಿಂದ ಗ್ರಾಮೀಣ ಭಾಗದ ಸಂಪನ್ಮೂಲಗಳ ಸದ್ಬಳಕೆಯು ಸಾಧ್ಯ. ಈ ಬಗ್ಗೆ ಸಹಕಾರ ಸಂಸ್ಥೆಗಳು ಚಿಂತಿಸಬೇಕು ಎಂದರು.

ಸೌಹಾರ್ದ ಕಾಯ್ದೆಯ ಮುಖ್ಯ ಉದ್ದೇಶ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತ, ಆ ಮೂಲಕ ಜನರ ಸಮಾಜದ ಅಭಿವೃದ್ಧಿ ಯಾಗಿದ್ದು, ಇದು ಯಾವುದೇ ಕಾಯ್ದೆ ಹಾಗೂ ಸಹಕಾರದ ಗುರಿ ಕೂಡ ಆಗಿರುತ್ತದೆ. ಗುಣಮಟ್ಟ ನಿರ್ವಹಣೆಯಿಂದ ಅಭಿವೃದ್ಧಿ ಸಾಧ್ಯ. ಈ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು ಸರ್ಕಾರದ ಅನುದಾನಗಳನ್ನು ನಿರೀಕ್ಷಿಸಬಾರದು ಎಂದು ಕರೆನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಇದರ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಯವರು ಬದಲಾವಣೆಯತ್ತ ಸಹಕಾರ ಕ್ಷೇತ್ರ ಸಿದ್ಧವಾಗಬೇಕಿದೆ ಎಂದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ ಶ್ರೀ ಬಿ.ಜಿ.ವೆಂಕಟೇಗೌಡರವರು, ತುಮಕೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಶ್ರೀ ಎನ್. ಗಂಗಣ್ಣ, ನಿರ್ದೇಶಕರಾದ ಶ್ರೀ ಟಿ.ಆರ್.ಸುರೇಶ್, ತುಮಕೂರು ಡಿ.ಸಿ.ಸಿ. ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಟಿ.ವಿ.ನರಸಿಂಹ ಮೂರ್ತಿ ಹಾಗೂ ಶ್ರೀ ಹೆಚ್ ಬಾಲಶೇಖರ್, ಉಪನಿಬಂಧಕರು ತುಮಕೂರು ಇವರು ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಬಿ. ಗಂಗಾ ಧರಯ್ಯನವರು ಸ್ವಾಗತವನ್ನು, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್‌ರವರು ಪ್ರಾಸ್ತಾವಿಕ ಭಾಷಣ ವನ್ನು ಹಾಗೂ ತುಮಕೂರು ಜಿಲ್ಲಾ ಸಹಕಾರಿ ಯೂನಿಯನ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಎಸ್.ಎಸ್. ಸಿದ್ದಪ್ಪಶೆಟ್ಟಿನವರು ವಂದನಾರ್ಪಣೆಯನ್ನು ಮಾಡಿದರು.

ಕಾರ್ಯಾಗಾರದಲ್ಲಿ 44 ಸೌಹಾರ್ದ ಸಹಕಾರಿಗಳಿಂದ 55 ಜನ ಪ್ರತಿನಿಧಿಗಳು ಹಾಗೂ 36 ಸಹಕಾರಿ ಸಂಘಗಳಿಂದ 41 ಜನ ಪ್ರತಿನಿಧಿಗಳು ಸ್ಥಿರದಂತೆ ಒಟ್ಟು 96ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ ಈ ತರಬೇತಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು. **– ದಿವ್ಯಾ ಟಿ.**

## ಆಗಸ್ಟ್ ಮಾಹೆಯ ಕಾರ್ಯಕ್ರಮಗಳು : ನಿರ್ದೇಶಕರ ತರಬೇತಿ, ವಾರ್ಷಿಕ ಸಾಮಾನ್ಯ ಸಭೆ ಮತ್ತು ಮಹಿಳಾ ಸಮಾವೇಶ

**ನಿರ್ದೇಶಕರುಗಳ ತರಬೇತಿ :** ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಹಮ್ಮಿಕೊಳ್ಳಲಿರುವ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು 60ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳ ನೋಂದಾವಣೆಯಾಗಿರುವ್ಯದರಿಂದ ದಿನಾಂಕ : 17,18 ಅಗಸ್ಟ್ 2012ರಂದು ಒಂದನೇ ತಂಡದ ತರಬೇತಿ ಕಾರ್ಯಕ್ರಮವು ಪ್ರಾದೇಶಿಕ ಆಡಳಿತ ನಿರ್ವಹಣಾ ಸಂಸ್ಥೆ ಪದ್ಮನಾಭನಗರ ಬನಶಂಕರಿ 2ನೇ ಹಂತ ಬೆಂಗಳೂರು ಇಲ್ಲಿ ನಡೆಯುತ್ತದೆ. ತರಬೇತಿಯಲ್ಲಿ ಭಾಗವಹಿಸಲು ಪ್ರತಿನಿಧಿಗಳಿಗೆ ಸೂಚನಾ ಪತ್ರ ಹಾಗೂ ಆಮಂತ್ರಣ ಪತ್ರಿಕೆಯನ್ನು ಕಳುಹಿಸಲಾಗುವುದು. ಅವರು ಮಾತ್ರ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಹಕರಿಸಲು ಕೋರಿದೆ.

**ಎರಡನೇ ತಂಡದ ಕಾರ್ಯಕ್ರಮ ದಿನಾಂಕ :** 7, 8 ಸೆಪ್ಟಂಬರ್ 2012ರಂದು ವ್ಯವಸ್ಥೆ ಮಾಡಲಾಗಿದೆ. ಎರಡನೇ ತಂಡದಲ್ಲಿ ಭಾಗವಹಿಸುವ ಪ್ರತಿನಿಧಿಗಳಿಗೆ ಪ್ರತ್ಯೇಕ ಸೂಚನಾ ಪತ್ರವನ್ನು ಕಳುಹಿಸಲಾಗುವುದು. ಎರಡನೇ ತಂಡದ ಪ್ರತಿನಿಧಿಗಳ ಸಂಖ್ಯೆ 60 ತಲುಪಿದ ಕಾರಣ ಮೂರನೇ ತಂಡದ ಕಾರ್ಯಕ್ರಮವನ್ನು ದಿನಾಂಕ : ಸೆಪ್ಟೆಂಬರ್ 16, 17, 2012ರಂದು ವ್ಯವಸ್ಥೆ ಮಾಡಲಾಗಿದೆ.

# ಬಡ್ಡಿಯೇತರ ಆದಾಯ ಹೆಚ್ಚಿಸುವ ಕಾರ್ಯಕ್ರಮಗಳನ್ನು ಜಾರಿಗೆ ಬಿ.ಹೆಚ್.ಕೃಷ್ಣಾರೆಡ್ಡಿ ಸಲಹೆ





ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ಸ್ಟೇಟ್ ಕ್ರೆಡಿಟ್ ಕೋ-ಆಪರೇಟಿವ್ ಸೋಸೈಟೀಸ್ ಅಸೋಷಿಯೇಷನ್ ಬೆಂಗಳೂರು, ಕೋಲಾರ ಜಿಲ್ಲಾ ಸಹಕಾರ ಯೂನಿಯನ್ ನಿ., ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಯೂನಿಯನ್ ನಿ., ಚಿಕ್ಕಬಳ್ಳಾಪುರ ಇವರುಗಳ ಸಹಯೋಗದೊಂದಿಗೆ ದಿನಾಂಕ : 13.05.2012 ರಂದು ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳು ಹಾಗೂ ಕ್ರೆಡಿಟ್ ಸಹಕಾರ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ "ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ" ಕಾರ್ಯಕ್ರಮವನ್ನು ಕೋಲಾರ ಜಿಲ್ಲಾ ಸಹಕಾರಿ ಯೂನಿಯನ್ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿಯವರು ಉದ್ಘಾಟನೆ ನೆರವೇರಿಸಿ ಮಾತನಾಡುತ್ತಾ, ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಸಂವಿಧಾನಾತ್ಮಕ ತಿದ್ದುಪಡಿಗಳ ಕುರಿತಂತೆ ಮಾಹಿತಿ ಒದಗಿಸಿದರು. ಅದಲ್ಲದೇ ಸಹಕಾರಿ ಸಂಸ್ಥೆಗಳು ಕೇವಲ ಠೇವಣಿ ಸಂಗ್ರಹಿಸಿ ಸಾಲ ನೀಡುವುದಷ್ಟೇ ಅಲ್ಲ ಈ ಸಾಂಪ್ರದಾಯಿಕ ಹಣಕಾಸಿನ ಲೇವಾದೇವಿ ವ್ಯವಹಾರದ ಜೊತೆಗೆ ಬಡ್ಡಿಯೇತರ ಆದಾಯ ಹೆಚ್ಚಿಸುವಂತಾಗಿ ಅನೇಕ ಕಾರ್ಯಕ್ರಮಗಳನ್ನು ಸಹಕಾರಿ ಸಂಸ್ಥೆಗಳಲ್ಲಿ ನಿರ್ವಹಿಸಬೇಕು ಎಂದು ಹೇಳಿದರು.

ಶ್ರೀ ಉರಿಗಿಲಿ ಎಸ್.ಆರ್. ರುದ್ರಸ್ವಾಮಿ ಅಧ್ಯಕ್ಷರು ಕೋಲಾರ ಜಿಲ್ಲಾ ಸಹಕಾರ ಯೂನಿಯನ್ ಇವರು ಕಾರ್ಯ ಕ್ರಮದ ಅಧ್ಯಕ್ಷತೆಯನ್ನು ವಹಿಸಿ ಕೋಲಾರದ ಸಹಕಾರ ಸಂಸ್ಥೆಗಳು ಸಂಖ್ಯಾತ್ಮಕವಾಗಿಯೂ ಗುಣಾತ್ಮಕವಾಗಿಯೂ ಬೆಳೆಯಬೇಕು ಎಂದು ಕರೆನೀಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಯತೀಶಕುಮಾರ ವ್ಯವಸ್ಥಾಪಕ ನಿರ್ದೇಶಕರು ಡಿಸಿಸಿ ಬ್ಯಾಂಕ್ ಕೋಲಾರ ಇವರು ಮಾತನಾಡುತ್ತಾ ಕೋಲಾರ ಭಾಗದಲ್ಲಿನ ಸಹಕಾರ ಸಂಸ್ಥೆಗಳ ಸಮಸ್ಯೆಗಳ ಕುರಿತು ಮತ್ತು ಅವುಗಳ ನಿವಾರಣೆಗೆ ಪ್ರಯತ್ನಿಸುವ ಕುರಿತು ವಿಷಯಗಳನ್ನು ಹಂಚಿಕೊಂಡರು. ಮುಖ್ಯ ಅತಿಥಿಗಳಾಗಿ ಶ್ರೀ ನಾಗೇಂದ್ರ ಗುಪ್ತ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಶ್ರೀ ಎಂ. ಆರ್. ಶಿವಣ್ಣ ಅಧ್ಯಕ್ಷರು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಯೂನಿಯನ್ ಚಿಕ್ಕಬಳ್ಳಾಪುರ, ಇವರುಗಳು ಉಪಸ್ಥಿತರಿದ್ದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ನಾಗೇಂದ್ರ ಗುಪ್ತ ಸ್ವಾಗತಿಸಿದರು.

ಈ ತರಬೇತಿಯಲ್ಲಿ 23 ಸೌಹಾರ್ದ ಸಹಕಾರಿಗಳ 27 ಜನ ಪ್ರತಿನಿಧಿಗಳು ಮತ್ತು 11 ಸಹಕಾರಿ ಸಂಘಗಳ 13 ಜನ ಪ್ರತಿನಿಧಿಗಳು ಸೇರಿದಂತೆ ಒಟ್ಟೂ 40ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

**– ಸಂತೋಷ ಬಸಣ್ಣವರ**

## ಬೆಂಗಳೂರಿನಲ್ಲಿ 30 ಆಗಸ್ಟ್ 2012 ರಂದು ಬೃಹತ್ ಮಹಿಳಾ ಸಮಾವೇಶ

ಅಂತರರಾಷ್ಟ್ರೀಯ ಸಹಕಾರಿಗಳ ವರ್ಷಾಚರಣೆಯ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯು ರಾಜ್ಯದ ಮಹಿಳಾ ಸಹಕಾರಿಗಳಿಗಾಗಿ ಬೆಂಗಳೂರಿನಲ್ಲಿ ದಿನಾಂಕ : 30-8-2012ರಂದು ಟೌನ್‌ಹಾಲನಲ್ಲಿ ಬೆಳಿಗ್ಗೆ 10-00 ಘಂಟೆಗೆ ಬೃಹತ ಸಮಾವೇಶವನ್ನು ಏರ್ಪಡಿಸಲಾಗಿದೆ.

"ಸಹಕಾರ ಕ್ಷೇತ್ರದ ಮೂಲಕ ಮಹಿಳೆಯರ ಸಬಲೀಕರಣ" ಎಂಬುದು ಈ ಸಮಾವೇಶದ ವಿಷಯವಾಗಿದೆ. ರಾಜ್ಯದ ಎಲ್ಲ ಮಹಿಳಾ ಸಹ ಕಾರಿಗಳು ಈ ಸಮಾವೇಶದಲ್ಲಿ ಭಾಗವಹಿಸಲು ಅವಕಾಶವಿದೆ. ಭಾಗ ವಹಿಸುವವರು ವ್ಯವಸ್ಥೆಯ ದೃಷ್ಟಿಯಿಂದ ಮುಂಚಿತವಾಗಿ ತಮ್ಮ ಹೆಸರನ್ನು ನೋಂದಣೆ ಮಾಡುವುದು ಅವಶ್ಯವಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಈ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್ ಅವರು ಉದ್ಘಾಟಿಸಲಿದ್ದಾರೆ.

ಸಹಕಾರ ಮಂತ್ರಿ ಶ್ರೀ ಬಿ.ಜೆ. ಪುಟ್ಟಸ್ವಾಮಿ, ಇಂಧನ ಸಚಿವೆ ಕು. ಶೋಭಾ ಕರಂದ್ಲಾಜೆ ಹಾಗೂ ಅನೇಕ ಸಹಕಾರಿ ಗಣ್ಯರು ಭಾಗವಹಿಸಲಿದ್ದಾರೆ.